
ನವಕರ್ನಾಟಕ ಕಿರಿಯರ ಕಥಾಮಾಲೆ

ಚೀನಾದ ಚಿಟ್ಟೆ ಕಥೆಗಳು

ಸಂಗ್ರಹ : ಬೇದ್ರೆ ಮಂಜುನಾಥ



ಪ್ರಾಚೀನ ಚೀನಾದ ಮಕ್ಕಳ ನೀತಿ ಕಥೆಗಳು

ನವಕರ್ನಾಟಕ ಪ್ರಕಾಶನದ ೨೭೬೨ನೇ ಪ್ರಕಟಣೆ

ನವಕರ್ನಾಟಕ ಕಿರಿಯರ ಕಥಾಮಾಲೆ

ಚೀನಾದ ಚುಟ್ಟಿ ಕಥೆಗಳು

(ಪ್ರಾಚೀನ ಚೀನಾದ ಮಕ್ಕಳ ನೀತಿ ಕಥೆಗಳು)

ಸಂಗ್ರಹ - ರೂಪಾಂತರ
ಬೇದ್ರೆ ಮಂಜುನಾಥ

ನವಕರ್ನಾಟಕ ಪ್ರಕಾಶನ

೫೦ರ ಸಂಭ್ರಮ ೧೯೬೦-೨೦೧೦

CHEENADA CHITTE KATHEGALU (Kannada)
A collection of Ancient Chinese moral stories for children
Compiled and rendered into Kannada by Bedre Manjunatha

First Edition : 2009 **Pages : 80** **Price : Rs. 40**

Paper used for this book : 60 gsm Maplitho 11.6 Kgs (1/8 Crown Size)

ಮೊದಲ ಮುದ್ರಣ : 2009

ಬೆಲೆ : ರೂ. 40

ಮುಖಚಿತ್ರ ಮತ್ತು ಒಳಚಿತ್ರಗಳು : ವಿವಿಧ ಚೀನೀ ಕಲಾವಿದರು
ವಿನ್ಯಾಸ : ನವಕರ್ನಾಟಕ ವಿನ್ಯಾಸ

ಪ್ರಕಾಶಕರು
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560 001
ದೂರವಾಣಿ : 22203580, 30578022 ಫ್ಯಾಕ್ಸ್ : 30578023
e-mail : navakarnataka@gmail.com
URL : www.navakarnataka.com
http: // navakarnataka.blogspot.com

ಶಾಖೆಗಳು

ಗಾಂಧಿನಗರ	ಕೆ. ಎಸ್. ರಾವ್ ರಸ್ತೆ	ರಾಮಸ್ವಾಮಿ ವೃತ್ತ	ಸ್ಟೇಷನ್ ರಸ್ತೆ
ಬೆಂಗಳೂರು-9	ಮಂಗಳೂರು-1	ಮೈಸೂರು- 24	ಗುಲ್ಬರ್ಗಾ - 2
✆ 22251382	✆ 2441016	✆ 2424094	✆ 224302

0111092762 **ISBN 978-81-8467-115-5**

Printed by R. S. Rajaram at Navakarnataka Printers, No. 167 & 168, 10th Main III Phase, Peenya Industrial Area, Bangalore - 560 058 and published by him for Navakarnataka Publications (P) Ltd., Embassy Centre, Crescent Road P. B. 5159, Bangalore-1 (INDIA). Typeset at Navakarnataka, Bangalore-560 001

ಅರ್ಪಣೆ



ಪುಸ್ತಕಲೋಕದಲ್ಲಿ ನಾಲ್ಕು ದಶಕಳಿಗೂ ಹೆಚ್ಚುಕಾಲ ಸಾರ್ಥಕ ಸೇವೆ
ಸಲ್ಲಿಸಿ, ಮಕ್ಕಳೊಂದಿಗೆ ಮಕ್ಕಳಾಗಿ ಬೆರೆಯುತ್ತಿದ್ದ ಅಕ್ಕರೆಯ ಅಜ್ಜ,
ಚಿತ್ರದುರ್ಗದ ಜ್ಞಾನಭಾರತೀ ವಿದ್ಯಾಮಂದಿರದ ಸಂಸ್ಥಾಪಕ
ಕಾರ್ಯದರ್ಶಿ, ದೀಪಕ್ ಬುಕ್ ಹೌಸ್ ಮಾಲೀಕ

ಶ್ರೀ ಎನ್. ವಿ. ಕೃಷ್ಣನ್

(ನೀಲಾವರ ವಾಸುದೇವರಾವ್ ಕೃಷ್ಣನ್)

(ಜನನ : 17.01.1940 ಮರಣ : 12.10.2009)

ಅವರ ಚಿರಂತನ ಸ್ಫೂರ್ತಿಚೇತನಕ್ಕೆ
ಪ್ರೀತಿಯಿಂದ



ಬೇದ್ರೆ ಮಂಜುನಾಥ

ಚಿಟ್ಟೆಕಥೆಗಳ ವೈಶಿಷ್ಟ್ಯ

ಚೀನಾದಲ್ಲಿ ನೀತಿ ಕಥೆಗಳು, ನಾಣ್ಣುಡಿಗಳು, ಗಾದೆಗಳು, ಒಗಟು, ನುಡಿಗಟ್ಟು ಇತ್ಯಾದಿಗಳನ್ನು ಉರುಹೊಡೆಯುವುದನ್ನು ಮಕ್ಕಳಿಗೆ ಕಲಿಸಲಾಗುತ್ತದೆಯಂತೆ. ದೊಡ್ಡವರಾದಂತೆ ಅವರು ಈ ನಾಣ್ಣುಡಿಗಳಲ್ಲಿ ಆಲೋಚಿಸುವುದನ್ನು ರೂಢಿಸಿಕೊಳ್ಳುವರಂತೆ !

ತಲೆತಲಾಂತರದಿಂದ ಬಾಯಿಂದ ಬಾಯಿಗೆ ಹರಿದು ಬಂದಿರುವ, ಅಗಾಧ ಅನುಭವ ರಾಶಿಯನ್ನು ಹೊತ್ತು ತಂದಿರುವ ಈ ನಾಣ್ಣುಡಿ, ನೀತಿಕಥೆ, ಒಡಪುಗಳೆಂದರೆ ಚೀನೀಯರಿಗೆ ಅಪಾರ ಅಭಿಮಾನ. ಆಧುನಿಕ ಚೀನೀ ನಿರ್ಮಾತೃ ಮಾವೋ ಕೂಡ ಇವುಗಳನ್ನು ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಿದ್ದರಂತೆ.

ಚೀನೀ ಕಥೆಗಳಲ್ಲಿ ಹಾಗೂ ನಾಣ್ಣುಡಿಗಳಲ್ಲಿ ಅಡಗಿರುವ ನೀತಿಯನ್ನು ಪಾಶ್ಚಾತ್ಯ ದೇಶಗಳ ಮಕ್ಕಳ ಕಥೆಗಳಲ್ಲಿರುವಂತೆ ಬಿಡಿಸಿ ಹೇಳಿರುವುದಿಲ್ಲ. ಓದುತ್ತಾ ಹೋದಂತೆ ಸಂದರ್ಭಕ್ಕೆ ತಕ್ಕಂತಹ ಅಪರೂಪದ ಅನುಭವ, ನೀತಿ, ತನ್ನಷ್ಟಕ್ಕೆ ತಾನೇ ಅನಾವರಣಗೊಳ್ಳುತ್ತದೆ.

ಚೀನಾದ ಪರಂಪರೆ ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಈ ಕಥೆಗಳು ಆಯಾ ಕಾಲದ ಸಂಗೀತ ಮತ್ತು ಚಿತ್ರಕಲೆಯೊಂದಿಗೆ ಸಮ್ಮಿಳಿತವಾಗಿವೆ. ಕ್ರಿ.ಪೂ.722 ರಿಂದ 221ರ ಅವಧಿಯಲ್ಲಿ

ಜನರ ಬಾಯಲ್ಲಿ ಹರಿದಾಡುತ್ತಿದ್ದ ನಾಣ್ಣುಡಿ ಮತ್ತು ಕಥೆಗಳನ್ನು ಚುವಾಂಗ್‌ತ್ಸು ಮತ್ತು ಲೀಯತ್ಸು ಎಂಬುವರು ಸಂಗ್ರಹಿಸಿದರೆಂದು ನಂಬಲಾಗಿದೆ. ಬುದ್ಧಿಮತ್ತೆಯನ್ನು ಒರೆಗೆ ಹಚ್ಚುವ, ಜೀವನ ಪಾಠಗಳನ್ನು ಕಲಿಸುವ ಈ ಕಥೆಗಳು ಪೀಳಿಗೆಯಿಂದ ಪೀಳಿಗೆಗೆ ಹರಿದುಬಂದಿದ್ದು ಇದೀಗ ಕನ್ನಡದ ಮೂಲಕ ನಿಮ್ಮ ಕೈ ಸೇರಿದೆ.

ಈ ಸಂಕಲನದಲ್ಲಿರುವ ಇಪ್ಪತ್ತೈದು ಕಥೆಗಳನ್ನು Ancient Chinese Fables ಎಂಬ ಚೀನೀ ಚಿತ್ರಕಥಾ ಸರಣಿಯ ಆರು ಪುಸ್ತಕಗಳಿಂದ ಮತ್ತು ಅಂತರಜಾಲದ ಇ - ಪುಸ್ತಕದಿಂದ ಆಯ್ದುಕೊಳ್ಳಲಾಗಿದ್ದು, ಫಾಂಗ್ ಯೀಯುನ್, ಯುವೋ ನೀ, ಶೆನ್ ಜಿ, ಲಿಯಾವೋ ಡಿ, ಡಿಂಗ್ ಅರ್, ಯೇಂಗ್ ಮಾ, ಅವರು ಸಂಗ್ರಹಿಸಿ ಪ್ರಕಟಿಸಿದ ಇಂಗ್ಲಿಷ್ ಅವತರಣಿಕೆ ಇದಾಗಿದ್ದು ಖ್ಯಾತ ಚೀನೀ ಕಲಾವಿದರಾದ ಯಾಂಗ್ ಶಿಮಿಂಗ್, ಟಿಯಾನ್ ಯುವಾನ್, ಹು ಹೊಂಕಾಯ್, ಚೆನ್ ಯಾಂಗ್‌ಯೆನ್, ಯೆಂಗ್ ಯೂಸುಅನ್, ಯೇ ಫೇಯಿ ಮೊದಲಾದವರು ರಚಿಸಿದ ಅಪರೂಪದ ಚಿತ್ರಗಳಿಂದ ಕೂಡಿದೆ. ಅಂತರಜಾಲದಲ್ಲಿಯೂ ದೊರೆತ ಕೆಲವು ಚಿತ್ರಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಮೂಲ ಚೀನೀ ಭಾಷೆಯಲ್ಲಿರುವ ಕಥೆಗಳ ಭಾವವನ್ನು ಇಂಗ್ಲಿಷ್ ಅವತರಣಿಕೆ ಎಷ್ಟರ ಮಟ್ಟಿಗೆ ಹಿಡಿದಿಟ್ಟಿತ್ತೋ ಅದರ ಭಾವವನ್ನು ಸರಳವಾಗಿ ಕನ್ನಡಕ್ಕೆ ತರಲು ಪ್ರಯತ್ನಿಸಲಾಗಿದೆ.

ಈ ಸಂಕಲನದ ಕೆಲವು ಕಥೆಗಳನ್ನು ಈ ಮೊದಲು ಕನ್ನಡ ಪ್ರಭದ ಸಾಪ್ತಾಹಿಕ ಪ್ರಭದಲ್ಲಿ ಧಾರಾವಾಹಿಯಾಗಿ ಪ್ರಕಟಿಸಲಾಗಿತ್ತು. ಮತ್ತೆ ಕೆಲವನ್ನು ಬಾಲಮಂಗಳ ಮಕ್ಕಳ ಪಾಕ್ಷಿಕ

ಮುದ್ರಿಸಿತ್ತು. ಚಿತ್ರದುರ್ಗದ ವೆಬ್‌ಪತ್ರಿಕೆ ಸುದ್ದಿಗಿಡುಗ ಕೂಡ ಇವುಗಳನ್ನು ಸರಣಿಯಾಗಿ ಪ್ರಕಟಿಸಿ ಮಕ್ಕಳಿಗೆ ತಲುಪಿಸಿತ್ತು. ಈ ಮೂರೂ ಪತ್ರಿಕೆಗಳ ಸಂಪಾದಕರು, ಉಪಸಂಪಾದಕರಿಗೆ ಧನ್ಯವಾದಗಳನ್ನು ಅರ್ಪಿಸುವುದು ಈ ಲೇಖಕನ ಕರ್ತವ್ಯ.

ಇದೀಗ ಈ ಕಥೆಗಳನ್ನು ನವಕರ್ನಾಟಕ ಕಿರಿಯರ ಕಥಾ ಮಾಲಿಕೆಯಲ್ಲಿ ಪ್ರಕಟಿಸುತ್ತಿರುವ ನವಕರ್ನಾಟಕ ಪ್ರಕಾಶನದ ಶ್ರೀ ಆರ್. ಎಸ್. ರಾಜಾರಾಮ್, ಶ್ರೀ ಎ. ಆರ್. ಉಡುಪ, ಶ್ರೀ ಕೆ. ಪಿ. ಸ್ವಾಮಿ ಮತ್ತು ಅವರ ಚಿಂತಕರ ಚಾವಡಿಗೆ, ಅಚ್ಚುಕಟ್ಟಾದ ಮುದ್ರಣ ಕಾರ್ಯದಲ್ಲಿ ಸಹಕರಿಸಿದ ಡಿ.ಟಿ.ಪಿ. ಮತ್ತು ಮುದ್ರಣ ವಿಭಾಗದ ಗೆಳೆಯರಿಗೆ, ಈ ಕಥೆಗಳನ್ನು ಹುಡುಕಿ, ತರ್ಜುಮೆ ಮಾಡುವ ಮೊದಲು ಅವುಗಳಿಗೆ ಕಿವಿಯಾಗಿ ಕುಳಿತ ಬೇದ್ರೆ ಸುಮಂತ್, ಬೇದ್ರೆ ಸಮರ್ಥ ಮತ್ತು ಚಿತ್ರದುರ್ಗದ ಹವ್ಯಾಸ ಮತ್ತು ಸಾಹಸ ಯುನೆಸ್ಕೊಕ್ಲಬ್‌ನ ಎಲ್ಲ ಸದಸ್ಯರಿಗೆ ತುಂಬು ಹೃದಯದ ಧನ್ಯವಾದಗಳು. ಮಕ್ಕಳಿಗಾಗಿ ಹತ್ತು ಹಲವು ಕಥೆ ಗಳನ್ನು ತಂದು ಕೊಡುತ್ತಿದ್ದ ಅಕ್ಕರೆಯ ಅಜ್ಜ ದೀಪಕ್ ಬುಕ್ ಹೌಸ್‌ನ ಶ್ರೀ ಎನ್. ವಿ. ಕೃಷ್ಣನ್, ಕಥೆಗಳನ್ನು ಕೈಗೆ ಕೊಟ್ಟು 'ಕನ್ನಡಕ್ಕೆ ತನ್ನಿ' ಎಂದು ಪ್ರೋತ್ಸಾಹಿಸಿದ ಶ್ರೀ ಆರ್. ಎಸ್. ರಾಜಾರಾಮ್ ಅವರುಗಳನ್ನು ಎಂದಾದರೂ ಮರೆಯುವುದುಂಟೇ ?

ರುಚಿಕಟ್ಟಾದ ಈ ಪುಟ್ಟ ಪುಟ್ಟ ಚಿಟ್ಟೆ ಕಥೆಗಳನ್ನು ನೀವೂ ಓದಿ, ನಿಮ್ಮ ಸ್ನೇಹಿತರಿಗೂ ಓದಲು ಕೊಡಿ. ಇಲ್ಲಿನ ಕಥೆಗಳು ಚಿಟ್ಟೆಗಳಂತೆ ಕೈಯಿಂದ ಕೈಗೆ ಹಾರಲಿ !

ಮಕ್ಕಳ ದಿನಾಚರಣೆ - 2009 ಬೇದ್ರೆ ಮಂಜುನಾಥ

ಪರಿವಿಡಿ



ತಪ್ಪು ದಾರಿಯ ಪ್ರಯಾಣ

ತಪ್ಪು ದಾರಿಯನ್ನು ಹಿಡಿದು ಮುನ್ನಡೆಯುತ್ತಾ ಹೋದರೆ ನಾವು ಗುರಿ ತಲುಪುತ್ತೇವೆಯೇ? ಸತತ ಬುದ್ಧಿವಾದದ ನಂತರವೂ ತನ್ನದೇ ಹಠಕ್ಕೆ ಅಂಟಿಕೊಂಡರೆ ಗುರಿಯಿಂದ ದೂರ ದೂರ ಹೋಗುತ್ತೇವೆ ಅಲ್ಲವೇ ? ಅಂತಹ ಕಥೆ ಇಲ್ಲಿದೆ.

ಚೀನಾದ ಹಳದಿ ನದಿಯ ದಂಡೆಯಲ್ಲಿ ವಾಸವಾಗಿದ್ದ ಒಬ್ಬಾನೊಬ್ಬ ಶ್ರೀಮಂತ ಸರದಾರನಿಗೆ ಚಾಂಗ್ ಜಿಯಾಂಗ್ ನದಿ ದಂಡೆಯಲ್ಲಿದ್ದ **ಚೂ** ರಾಜ್ಯಕ್ಕೆ ಹೋಗಬೇಕು ಎನಿಸಿತು. **ಚೂ** ರಾಜ್ಯ ಹಳದಿ ನದಿಯ ದಕ್ಷಿಣಕ್ಕೆ ಇತ್ತು. ದಕ್ಷಿಣದೆಡೆಗೆ ಪ್ರಯಾಣಮಾಡುವ ಸಾರೋಟನ್ನು ಏರದೇ ಉತ್ತರ ದಿಕ್ಕಿನತ್ತ ಹೋಗುವ ಕುದುರೆ ಸಾರೋಟಿನಲ್ಲಿ ಕುಳಿತು **ಚೂ** ರಾಜ್ಯಕ್ಕೆ ಎಂದು ಫಲಕ ಅಂಟಿಸಿಕೊಂಡು, ಆ ದೌಲತ್ತಿನ ಶ್ರೀಮಂತ ಉತ್ತರಾಭಿಮುಖವಾಗಿಯೇ ದೌಡಾಯಿಸಿದ !

ದಾರಿಯಲ್ಲಿ ಯಾರೋ ಒಬ್ಬರು ಕೂಗಿ ಹೇಳಿದರು, “ಅಲ್ಲಯ್ಯಾ, ನೀನು **ಚೂ** ರಾಜ್ಯಕ್ಕೆ ಹೋಗುವವನಿದ್ದೀ. ಅದು ದಕ್ಷಿಣಕ್ಕಿದೆ. ನೀನೋ ಉತ್ತರಕ್ಕೆ ಹೊರಟಿದ್ದೀಯಲ್ಲಾ, ಅದು ತಪ್ಪು ದಿಕ್ಕಿನ ಪ್ರಯಾಣ, ಅಲ್ವೇ ?”

“ಓಹ್! ಅದೇನೂ ದೊಡ್ಡ ವಿಷಯವೇ ಅಲ್ಲ. ನನ್ನ ಚಂದದ ಚಿಗರೆಯಂತಹ ಕುದುರೆಗಳನ್ನು ನೋಡು. ಅವು ಎಷ್ಟು



ವೇಗವಾಗಿ ಗಾಳಿಯಂತೆ ಮುನ್ನುಗ್ಗಿ ಧಾವಿಸುತ್ತಿವೆ ಎಂಬುದು ನಿನಗೆ ಕಾಣಿಸುತ್ತಿಲ್ಲವೇ,'' ಎಂದು ದೌಲತ್ತಿನಿಂದಲೇ ಉತ್ತರಿಸಿದ ಆ ಶ್ರೀಮಂತ ತನ್ನ ಸಾರೋಟಿನ ವೇಗವನ್ನು ಇನ್ನೂ ಹೆಚ್ಚಿಸಿದ !

ಹೀಗೆ, ಮುಂದೆ ಮುಂದೆ, ಮುಂದೆ ಉತ್ತರಕ್ಕೆ ಹೋಗುತ್ತಲೇ ಇದ್ದ ಅವನನ್ನು ನೋಡಿದ ಹಾದಿಹೋಕನೊಬ್ಬ, ''ನೀನು ದಕ್ಷಿಣ ದಿಕ್ಕಿಗೆ ಪ್ರಯಾಣ ಮಾಡಬೇಕು ಅಲ್ವಾ !'' ಎಂದು ಆಶ್ಚರ್ಯ ವ್ಯಕ್ತಪಡಿಸಿದ. ಅದಕ್ಕೆ ಆ ಬುದ್ಧಿವಂತ ಶ್ರೀಮಂತ, ''ಅದೇನು ಅಂಥಾ ಪ್ರಮುಖವಾದ ವಿಷಯವೇ ಅಲ್ಲ, ಬಿಡು. ನನ್ನ ಹತ್ತಿರ ಪ್ರಯಾಣಕ್ಕೆ ಬೇಕಾಗೋವಷ್ಟು ದುಡ್ಡಿದೆ,'' ಎಂದ.

ಆತನ ಸಾರೋಟು ಗಾಳಿಯ ವೇಗದಲ್ಲಿ ಉತ್ತರ ದಿಕ್ಕಿನತ್ತಲೇ ಧಾವಿಸುತ್ತಿತ್ತು. ''ಚೂ ರಾಜ್ಯ ಇರುವುದು ದಕ್ಷಿಣಕ್ಕೆ ಸ್ವಾಮಿ,'' ಎಂದು ದಾರಿಯಲ್ಲಿ ವಿಶ್ರಾಂತಿಗೆ ನಿಂತಾಗ ಯಾರೋ ಒಬ್ಬರು ಹೇಳಿದರು. ''ಅದಕ್ಯಾಕೆ ಚಿಂತೆ ! ನೋಡು, ನನ್ನ ಸಾರಥಿ ಎಷ್ಟು

ಕುಶಲನಾಗಿದ್ದಾನೆ'' ಎಂದು ಹೇಳಿ ತನ್ನ ಪ್ರಯಾಣ ಮುಂದುವರೆಸಿದ.

ಹೀಗೆ ಯಾರ ಬುದ್ಧಿಯ ಮಾತುಗಳನ್ನೂ ಕೇಳದೆ ಆತ ತನ್ನ ಮೂಗಿನ ನೇರಕ್ಕೆ, ಉತ್ತರಾಭಿಮುಖವಾಗಿಯೇ ಪ್ರಯಾಣ ಮುಂದುವರೆಸುತ್ತಲೇ ಹೋದ. ತಪ್ಪು ದಿಕ್ಕಿನ ಕಡೆಗೆ ಹೋಗುತ್ತಿದ್ದುದರಿಂದ ಆತ **ಚೂ** ರಾಜ್ಯ ತಲುಪಲೇ ಇಲ್ಲ! ಧನಮದ, ಬುದ್ಧಿಮದದ ಆತ ಉತ್ತರದ ತುತ್ತ ತುದಿಯವರೆಗೂ ಪ್ರಯಾಣಿಸುತ್ತಾ **ಚೂ** ರಾಜ್ಯದಿಂದ ದೂರ ದೂರ ದೂರ ದೂರಕ್ಕೆ ಹೋಗುತ್ತಲೇ ಇದ್ದ! ಎಂದಾದರೊಂದು ದಿನ **ಚೂ** ರಾಜ್ಯವನ್ನು ತಲುಪುವ ಕನಸು ಕಾಣುತ್ತಲೇ ಇದ್ದ!!

ನಮ್ಮಲ್ಲಿಯೂ ಇಂತಹವರು ಇದ್ದಾರೆ, ಅಲ್ವಾ ?



ಇಬ್ಬರ ಜಗಳ ಮೂರನೆಯವರಿಗೆ ಲಾಭ


ಇಬ್ಬರ ಜಗಳ ಮೂರನೆಯವರಿಗೆ ಲಾಭ ಅನ್ನೋ ಗಾದೆ ಮಾತನ್ನು ಕೇಳಿರಬೇಕು, ಅಲ್ವಾ ? ಅಂತಹದೇ ಕಥೆ ಇದು.

ಚೀನಾದ ಹ್ವಾಂಗ್‌ಹೋ ನದಿಯ ದಂಡೆಯಲ್ಲಿ ಕಪ್ಪೆಚಿಪ್ಪೊಂದು ಆನಂದದಿಂದ ಬಿಸಿಲು ಕಾಯಿಸುತ್ತಿತ್ತು. ನೀಳ ಕೊಕ್ಕಿನ ಬೇಟೆ ಹಕ್ಕಿ ಉಲ್ಲಂಗಿ ಅಲ್ಲಿಗೆ ಬಂತು. ಮೀನು, ಸೀಗಡಿ, ಮೃದ್ವಂಗಿಗಳನ್ನು ಹೆಕ್ಕಿ ತಿನ್ನುವ ಈ ಉಲ್ಲಂಗಿಗೆ ತನ್ನೆರಡೂ ಚಿಪ್ಪುಗಳನ್ನು ತೆರೆದಿಟ್ಟು ಎಳೆ ಬಿಸಿಲನ್ನು ಆನಂದಿಸುತ್ತಾ ಇದ್ದ ಕಪ್ಪೆಚಿಪ್ಪು ಕಣ್ಣಿಗೆ ಬಿತ್ತು. ಅದರ ಮೃದು ಮಾಂಸವನ್ನು ಕುಕ್ಕಿ ತೆಗೆಯಲು ತನ್ನ ನೀಳ ಕೊಕ್ಕನ್ನು ಅತ್ತ ಚಾಚಿತು.

ಮಿಂಚಿನಂತೆ ಕಪ್ಪೆಚಿಪ್ಪು ತನ್ನ ಎರಡೂ ಚಿಪ್ಪುಗಳನ್ನು ಮಡಚಿ ಕೊಂಡು ಉಲ್ಲಂಗಿಯ ಕೊಕ್ಕನ್ನು ಬಿಗಿಯಾಗಿ ಹಿಡಿದುಬಿಟ್ಟಿತು ! ನಿಧಾನವಾಗಿ ತನ್ನ ಹಿಡಿತವನ್ನು ಬಲಪಡಿಸತೊಡಗಿತು.

ಧೈರ್ಯ ಕೆಡದ ಉಲ್ಲಂಗಿ, ''ಕಪ್ಪೇಚಿಪ್ಪೇ, ನಿನ್ನನ್ನು ನಾನು ಹೀಗೆಯೇ ಹಿಡಿದುಕೊಂಡುಬಿಟ್ಟರೆ ನೀನು ಬಿಸಿಲಿಗೆ ಒಣಗಿ ಹೋಗ್ತೀಯಾ. ನೀರಿಗೆ ಮರಳಲು ಆಗದೇ ಸತ್ತೇ ಹೋಗ್ತೀಯಾ'' ಎಂದಿತು.

ಅದಕ್ಕೆ ಆ ಜಾಣ ಕಪ್ಪೆಚಿಪ್ಪು, ''ಪೆದ್ದು ಉಲ್ಲಂಗಿ, ಮೂತಿ ಮಾತ್ರ ಉದ್ದ ಇದೆಯೇ ವಿನಾ ಬುದ್ಧಿ ಚುರುಕಿಲ್ಲ ನಿನಗೆ. ನಾನೇ



ಅಲ್ವೇ ನಿನ್ನ ಕೊಕ್ಕನ್ನು ಹಿಡಿದಿರುವುದು. ನಾನು ಹೀಗೆಯೇ ನಿನ್ನ ಮೂತಿಯನ್ನು ಮುಚ್ಚಿಹಿಡಿದೇ ಇದ್ದರೆ ಇನ್ನೊಂದೆರಡು ದಿನಗಳಲ್ಲಿ ಆಹಾರ ಇಲ್ಲದೆ ಹಸಿವಿನಿಂದ ಸತ್ತೇ ಹೋಗ್ತೀಯಾ, ಗೊತ್ತಾ?'' ಎಂದು ಅಣಕಿಸಿತು. ಸಾವಿನ ದವಡೆಯಲ್ಲೂ ಸರಸ ಅದಕ್ಕೆ!

''ನಾನು ನಿನ್ನನ್ನು ಹಿಡಿದಿರೋದು.''

''ನಾನು ನಿನ್ನನ್ನು ಹಿಡಿದಿರೋದು.''

''ನಾನೇ ನಿನ್ನನ್ನು ಹಿಡಿದಿರೋದು, ನೀನಲ್ಲ.''

''ನಾನೇ ನಿನ್ನನ್ನು ಹಿಡಿದಿರೋದು, ನೀನಲ್ಲ.''



ಹೀಗೆ ಪರಸ್ಪರ ವಾದ ಮಾಡುತ್ತಾ ಇದ್ದವು. ಬಡಪಟ್ಟಿಗೆ ಸೋಲೊಪ್ಪಲು ಇಬ್ಬರೂ ತಯಾರಿಲ್ಲ. ಅಹಂ ಮತ್ತೆ!

ಬಿಸಿಲೇರುವ ಹೊತ್ತಿಗೆ ಅಲ್ಲಿಗೆ ಬಂದ ಮೀನುಗಾರನೊಬ್ಬ ಈ ಸೋಜಿಗವನ್ನು ನೋಡುತ್ತಾ ನಿಂತ. ಇವೆರಡರ ಜಗಳ ಬಗೆ ಹರಿಯುವಂತೆ ಕಾಣಲಿಲ್ಲವಾದ್ದರಿಂದ ಎರಡನ್ನೂ ಹಿಡಿದು ಕೊಂಡು ಆನಂದದಿಂದ ಮನೆಗೆ ಹೋದ.

ಇಬ್ಬರ ಜಗಳ, ಮೂರನೆಯವರಿಗೆ ಲಾಭ ಅಂತ ಇದಕ್ಕೇ ಹೇಳೋದೇನೋ, ಅಲ್ವೇ!

ಶಕ್ತಿಶಾಲಿ ನರಿ - ಹೆದರುಪುಕ್ಕ ಹುಲಿ !

ಸಿಂಹ ಕಾಡಿನ ರಾಜ ಅನ್ನೋದು ನಿಮಗೆ ಗೊತ್ತಲ್ವಾ ?

ಆದರೆ ಚೀನಾದ ಒಂದು ಕಾಡಿನಲ್ಲಿ ಹುಲಿಯೇ ಕಾಡಿನ ರಾಜ. ಅದೊಂದು ದಿನ ಅದು ಠಕ್ಕ ನರಿಯೊಂದನ್ನು ಬೇಟೆಯಾಡಿ ಹಿಡಿಯಿತು. ಇನ್ನೇನು ಅದನ್ನು ತಿನ್ನಬೇಕು, ಆಗ ಆ ಗುಳ್ಳೇನರಿ ಹೇಳಿತು, ''ಅಯ್ಯಾ ಹುಲಿರಾಯ, ನನಗೆ ದೇವನ ಆದೇಶವಾಗಿದೆ. ಅವನ ಆಣತಿಯಂತೆ ನಾನು ಇಲ್ಲಿ ಬಂದಿದ್ದೇನೆ. ಈ ದೇವದೂತನನ್ನು ಯಾರಾದರೂ ಕೊಲ್ಲುತ್ತಾರೆಯೇ ?''

ಹುಲಿ ಕ್ಷಣಕಾಲ ದಂಗಾಯಿತು. ಆದರೂ ನರಿಯ ಮಾತನ್ನು ನಂಬದೇ ಅದರ ಮೇಲೆ ಎರಗಲು ನೋಡಿತು.

ನರಿ ಸುಮ್ಮನಿದ್ದೀತೇ ? ಮತ್ತೆ ಅದರ ಗೋಣಗಾಟ ಆರಂಭವಾಯ್ತು.

''ನೀನು ನನ್ನ ಮಾತನ್ನು ನಂಬುತ್ತಿಲ್ಲ, ಅಲ್ಲವೇ ? ಹಾಗಾದರೆ ನನ್ನ ಹಿಂದೆ ಸ್ವಲ್ಪ ದೂರ ಬಾ. ನನ್ನನ್ನು ನೋಡಿ ಪ್ರಾಣಿಗಳು ಹೇಗೆ ಹೆದರಿ ಗೌರವಿಸ್ತಾರೆ, ದೂರ ಓಡಿಹೋಗ್ತಾರೆ ಅನ್ನೋದನ್ನು ನೋಡಿ ನನ್ನ ಮಹಿಮೆ ತಿಳಿಯುತ್ತೀಯಂತೆ'' ಎಂದು ಹುಲಿಯನ್ನು ಆಹ್ವಾನಿಸಿತು.

ಹುಲಿಯೂ ಅದನ್ನು ಒಪ್ಪಿ ನರಿಯ ಹಿಂದೆ ಹೋಯಿತು. ನರಿ ಮುಂದೆ, ಹುಲಿ ಹಿಂದೆ. ಎಂಥಾ ಮಜ ಅಲ್ವಾ !



ಹುಲಿ ಮತ್ತು ನರಿಯ ಈ ಮೆರವಣಿಗೆಯನ್ನು ನೋಡಿದ ಕೆಲವು ಮೊಲಗಳು ಸತ್ತೆವೋ ಕೆಟ್ಟೆವೋ ಅಂತ ಜೀವ ಉಳಿಸಿಕೊಳ್ಳಲು ಓಡಿ ಪೊದೆ ಸೇರಿಕೊಂಡವು.

ಅಲ್ಲೇ ಆಟವಾಡುತ್ತಿದ್ದ ಕೋತಿಗಳು ಹುಲಿ ಬರುವುದನ್ನು ನೋಡಿ ಹೆದರಿ ಛಂಗನೇ ಹಾರಿ ಮರದ ಎತ್ತರದ ಕೊಂಬೆ ಏರಿ ಕುಳಿತವು. ತೊರೆಯಲ್ಲಿ ನೀರು ಕುಡಿಯುತ್ತಿದ್ದ ಜಿಂಕೆಗಳು ಹುಲಿ ಬರುತ್ತಿರುವುದನ್ನು ನೋಡಿ ಬೇಗನೇ ತಮ್ಮ ಕಾಲುಗಳಿಗೆ ಬುದ್ಧಿ ಹೇಳಿದವು.

''ನೋಡಿದ್ಯಾ, ಹುಲಿರಾಯ, ಈ ಪ್ರಾಣಿಗಳೆಲ್ಲಾ ನನ್ನನ್ನು ನೋಡಿ ಎಷ್ಟೊಂದು ಹೆದರಿ ಕಂಗಾಲಾಗಿ ಓಡುತ್ತಿವೆ ಅಂತ. ಈಗಲಾದರೂ ಒಪ್ತೀಯಾ, ನಾನು ನಿನಗಿಂತ ಹೆಚ್ಚು ಶಕ್ತಿಶಾಲಿ, ದೇವರ ದೂತ ಅಂತ !'' ಎಂದು ನರಿ ಜಂಭ ಕೊಚ್ಚಿತು.

ನಿಜವಾಗಿ ನಡೆದದ್ದೆಂದರೆ ಆ ಪುಟ್ಟ ಪ್ರಾಣಿಗಳು ಹುಲಿಯನ್ನು ಕಂಡು ಹೆದರಿದವೇ ವಿನಾ ನರಿಯನ್ನಲ್ಲ.



ಪೆದ್ದು ಹುಲಿ ಕೂಡ ನರಿಯ ಮಾತನ್ನೇ ನಿಜ ಎಂದು ನಂಬಿಬಿಡಬೇಕೇ!

ದೇವದೂತನಿವ ಶಕ್ತಿಶಾಲಿ ಅಂತ ಅಂದುಕೊಂಡು ನರಿಯನ್ನು ಕೊಲ್ಲದೇ ಹೋಗಲು ಬಿಟ್ಟಿತು!

ತಂತ್ರಗಾರ ನರಿ ತನ್ನ ಬುದ್ಧಿವಂತಿಕೆಯಿಂದ ಜೀವವುಳಿಸಿ ಕೊಂಡು ಅಲ್ಲಿಂದ ದೂರಕ್ಕೆ ಓಡಿಬಿಟ್ಟಿತು!

ನೋಡಿದ್ರಾ, ಎಂಥ ಚತುರ ಈ ಕರಟಕ ಅಂತ!



ಎಲ್ಲರೊಂದೇ ಎಂದು ಬಗೆದ ಜಿಂಕೆ ಸತ್ತದ್ದು ಯಾಕೆ ?

ಎಲ್ಲರೂ ನಮ್ಮವರೇ ಎಂದು ನಾವು ಭಾವಿಸುತ್ತೇವೆ. ಆದರೆ ಕೆಲವರು ಹಾಗೆ ಭಾವಿಸದೇ ಒಳ್ಳೆಯವರ ಮೇಲೇರಿ ಹೋಗುವುದನ್ನು ನೋಡಿರುತ್ತೀರಿ, ಅಲ್ವಾ? ಒಳ್ಳೆಯತನಕ್ಕೆ ಎಂಥಾ ಬಹುಮಾನ! ಅಂತಹದೇ ಒಂದು ಕಥೆ ಇದು.

ಚೀನಾ ದೇಶದ ಲಿನ್‌ಜಿಯಾಂಗ್ ಕಾಡಿನಲ್ಲಿ ಒಮ್ಮೆ ಪುಟ್ಟ ಜಿಂಕೆಯನ್ನು ಹಿಡಿದ ಬೇಟೆಗಾರ ಅದನ್ನು ತನ್ನ ಮನೆಗೆ ಒಯ್ದು ಕೊಟ್ಟಿಗೆಯಲ್ಲಿ ಇರಿಸಿದ. ಅವನ ಬೇಟೆ ನಾಯಿಗಳು ಅದನ್ನು ಕೊಂದು ತಿನ್ನಲು ಆ ಪುಟ್ಟ ಜಿಂಕೆಯ ಮೇಲೆಗರಿ ಕಚ್ಚಿ ಗಾಯಗೊಳಿಸತೊಡಗಿದವು.

ಅದೇಕೋ ಆ ಬೇಟೆಗಾರನಿಗೆ ಈ ಪುಟಾಣಿ ಜಿಂಕೆಯ ಮೇಲೆ ಪ್ರೀತಿ. ನಾಯಿಗಳನ್ನು ಗದರಿಸಿ ದೂರ ಮಾಡಿ ಜಿಂಕೆಯನ್ನು ರಕ್ಷಿಸಿದ. ಬೇರೆ ಯಾವುದೇ ನಾಯಿಯೂ ಅದನ್ನು ಮುಟ್ಟದಂತೆ ಕಣ್ಗಾವಲಿಟ್ಟ. ಅವನ ಕಣ್ತಪ್ಪಿಸಿ ಬೇಟೆನಾಯಿಗಳು ಜಿಂಕೆಯನ್ನು ಹಿಡಿಯಲು ಸಾಧ್ಯವೇ ಇರಲಿಲ್ಲ.

ಒಂದು ದಿನ, 'ಈ ಪುಟ್ಟ ಜಿಂಕೆ ನಮ್ಮ ನಾಯಿಗಳೊಂದಿಗೆ ಸ್ನೇಹದಿಂದ ಇದ್ದು ಆಟವಾಡಿಕೊಂಡಿದ್ದರೆ ಸಮಸ್ಯೆಯೇ ಇರೋಲ್ಲ. ಅವೂ ಕೂಡ ಈ ಜಿಂಕೆಯನ್ನು ಇಷ್ಟಪಡಬಹುದು. ನಾನು ಎಷ್ಟು ಅಂತ ಕಾವಲು ಕಾಯಲು ಸಾಧ್ಯ' ಎಂದುಕೊಂಡು



ಆ ನಾಯಿಗಳೊಂದಿಗೆ ಜಿಂಕೆಯನ್ನು ಆಟವಾಡಲು ಬಿಟ್ಟ.

ಮೊದಲಿಗೆ ಜಿಂಕೆ ಹೆದರಿದಂತೆ ಕಂಡರೂ ನಿಧಾನಕ್ಕೆ ನಾಯಿಗಳೊಂದಿಗೆ ಸ್ನೇಹ ಬೆಳೆಸಲು ಹತ್ತಿರ ಹೋಗತೊಡಗಿತು. ಬೇಟೆಗಾರನೂ ಕೂಡ ನಾಯಿಗಳನ್ನು ಹತ್ತಿರ ಕರೆದು ಜಿಂಕೆಯ ಜೊತೆಯಲ್ಲೇ ಅವುಗಳಿಗೂ ಆಹಾರ ನೀಡತೊಡಗಿದ. ಒಟ್ಟಿಗೇ

ಊಟ, ಒಟ್ಟಿಗೇ ಆಟ ಆರಂಭ ಆಯ್ತು. ನಾಯಿಗಳೂ ಕೂಡ ಕ್ರಮೇಣ ಜಿಂಕೆಯನ್ನು ತಮ್ಮ ಪರಿವಾರದ ಒಬ್ಬ ಸದಸ್ಯನನ್ನಾಗಿ ಭಾವಿಸತೊಡಗಿದವು. ಸ್ವಲ್ಪ ಕಾಲದಲ್ಲೇ ಅವು ಒಳ್ಳೆಯ ಸ್ನೇಹಿತರೇ ಆದವು. ಬೇಟೆಗಾರನಿಗೆ ಈಗ ನಿರಾಳವಾಯ್ತು.

ತುಂಟ ಜಿಂಕೆ ನಾಯಿಗಳ ಜೊತೆ ಎಷ್ಟು ಸಲಿಗೆ ಬೆಳೆಸಿ ಕೊಂಡಿತೆಂದರೆ ಅದು ಓಡಿಬಂದು ನಾಯಿಗೆ ಢಿಕ್ಕಿ ಹೊಡೆದು, ಬೀಳಿಸಿ, ದೂಡಿ, ಕಾಟ ಕೊಟ್ಟು ಮಜಾ ತೆಗೆದುಕೊಳ್ಳುವುದು,





ತನ್ನ ಪುಟ್ಟ ಗೊರಸಿನಿಂದ ನಾಯಿಗಳಿಗೆ ಕಚಗುಳಿ ಇಡುವುದು, ತಮಾಷೆ ಮಾಡುವುದು, ನಗಿಸುವುದು, ನಕಲಿ ಮಾಡುವುದು, ಚಿನ್ನಾಟ ಆಡುವುದು ಮಾಡುತ್ತಿತ್ತು. ತನ್ನ ಯಜಮಾನ ಮತ್ತು ಅವನ ನಾಯಿಗಳೊಂದಿಗೆ ತೀರಾ ಸಲುಗೆ ಬೆಳೆಯುತ್ತಾ ಹೋದಂತೆ ಅದೂ ಬೆಳೆದು ದೊಡ್ಡದಾಯಿತು.

ಹೀಗೇ ಮೂರು ವರ್ಷ ಕಳೆದಿರಬಹುದು. ಆಗೀಗ ಅದು ತನ್ನ ಯಜಮಾನನ ತೋಟದ ಆಚೆಗೂ ಹೋಗಿ ಬರುವ ಹವ್ಯಾಸ ಬೆಳೆಸಿಕೊಂಡಿತು. ನಾಯಿಗಳೂ ಅದರ ಜೊತೆ ಹೋಗಿ ಬರುತ್ತಿದ್ದವು. ಯಾವುದೇ ಅಚಾತುರ್ಯಕ್ಕೆ ಎಡೆಯಿರಲಿಲ್ಲ.

ಒಂದು ದಿನ ತನ್ನ ಯಜಮಾನನ ತೋಟದಿಂದ ಹೊರಟ ಜಿಂಕೆ ಸ್ವಲ್ಪ ದೂರ ಹೋದ ಮೇಲೆ ದೂರದಲ್ಲಿ ಕೆಲವು ನಾಯಿಗಳನ್ನು ನೋಡಿತು. ತನ್ನ ಗೆಳೆಯರಂತೆಯೇ ಈ ನಾಯಿಗಳೂ ಕೂಡ ಎಂದು ಭಾವಿಸಿತು. ಬೇರೆಯವರಿಗೆ ಸೇರಿದರೇನಂತೆ ನಾಯಿಗಳು ನಂಬಿಕಸ್ತ ಸೇವಕರಲ್ಲವೇ? ಎಲ್ಲರೂ ಒಂದೇ ಎಂದುಕೊಂಡು ಆ ನಾಯಿಗಳ ಜೊತೆಗೆ ಆಟವಾಡಲು ಹೋಯಿತು.

ಅಷ್ಟೊಂದು ಸಲೀಸಾಗಿ ತಮ್ಮತ್ತ ಬರುತ್ತಿರುವ ಆ ಜಿಂಕೆಯನ್ನು ತಮ್ಮ ಬೇಟೆಯೆಂದೇ ಭಾವಿಸಿದ ಆ ಇತರ ನಾಯಿಗಳು ಅದನ್ನು ಸುತ್ತವರೆದು ಒಟ್ಟಿಗೇ ಜಿಂಕೆಯ ಮೇಲೆ ಎರಗಿದವು. ಚೆನ್ನಾಗಿ ಕಚ್ಚಿ ಸಾಯಿಸಿಯೇ ಬಿಟ್ಟವು!

ತೀವ್ರತರವಾಗಿ ಗಾಯಗೊಂಡ ಜಿಂಕೆಗೆ ಸಾಯುವ ಸಮಯದಲ್ಲಿ ತಾನು ಯಾಕೆ ಹೀಗೆ ಮೋಸಹೋದೆ? ತನ್ನ ತಪ್ಪಾದರೂ ಏನಾಗಿತ್ತು? ಎಲ್ಲರೂ ಒಂದೇ ಅಲ್ಲವೇ? ಹಾಗೆ ಭಾವಿಸಿದ್ದೇ ತಪ್ಪೇ? ಯಾವುದು ಸರಿ? ಯಾವುದು ತಪ್ಪು? ಎಂದು ತಿಳಿಯದೇ ದಿಗ್ಭ್ರಮೆಯಿಂದ ಜೀವ ಬಿಟ್ಟಿತು!

ಯಾವಾಗಲೂ ಬೆದರುಬೊಂಬೆಯೇ ಅಲ್ಲ!


ಕಣ್ಣಿಗೆ ಕಂಡರೂ ಪರಾಂಬರಿಸಿ ನೋಡು ಅನ್ನುವ ಗಾದೆ ನಿಮಗೆ ಗೊತ್ತಲ್ಲಾ? ಅಂತಹ ಒಂದು ಕಥೆ ಇಲ್ಲಿದೆ, ಕೇಳಿ.

ಚೀನಾದ ಹ್ವಾಂಗ್ ಹೋ ನದಿ ದಂಡೆಯಲ್ಲಿದ್ದ ಕಾಡಿನ ಬಳಿಯಲ್ಲಿನ ಒಂದು ಕೊಳದಲ್ಲಿ ಒಬ್ಬ ಮೀನುಗಾರ ತನ್ನ ಮೀನು ಹಿಡಿಯುವ ಕಾಯಕದಲ್ಲಿ ನಿರತನಾಗಿದ್ದ. ಅಲ್ಲಿಯೇ ಮೀಂಚುಳ್ಳಿಯೊಂದು ದಿನವೂ ಮೀನು ಹಿಡಿಯಲು ಬರುತ್ತಿತ್ತು.

ಆ ಮೀನುಗಾರ ಕೊಳಕ್ಕೆ ಬಂದಾಗ ಮೀಂಚುಳ್ಳಿ ಅಲ್ಲಿಂದ ಹಾರಿಹೋಗಿ ದೂರದಲ್ಲಿದ್ದ ಮರವೊಂದರ ಮೇಲೆ ಕುಳಿತು ಕೊಳ್ಳುತ್ತಿದ್ದು, ಆತ ಅಲ್ಲಿಂದ ಎದ್ದು ಹೊರಟಾಗ ಮತ್ತೆ ಕೊಳಕ್ಕೆ ಇಳಿದು ಮೀನು ಹಿಡಿಯುತ್ತಿತ್ತು.

ಇದನ್ನು ಗಮನಿಸಿದ ಆ ಮೀನುಗಾರ ಒಂದು ಬೆದರು ಬೊಂಬೆಯನ್ನು ಹುಲ್ಲಿನಿಂದ ತಯಾರಿಸಿ, ತನ್ನ ಬಟ್ಟೆಗಳನ್ನು ಅದಕ್ಕೆ ತೊಡಿಸಿ, ಹುಲ್ಲಿನ ಟೊಪ್ಪಿಯನ್ನು ಹಾಕಿ, ತಾನೇ ಅಲ್ಲಿ ನಿಂತಿರುವಂತೆ ತೋರುವ ರೀತಿಯಲ್ಲಿ ಕೊಳದ ಬಳಿ ನಿಲ್ಲಿಸಿದ.

ನಿಜವಾಗಿಯೂ ಅದು ಮೀನುಗಾರನೇ ಎಂದು ಭ್ರಮಿಸಿದ ಮೀಂಚುಳ್ಳಿ ಹೆದರಿಕೊಂಡು, ಕೊಳಕ್ಕೆ ಇಳಿಯದೇ, ದೂರದ ಮರದಲ್ಲಿ ಕುಳಿತು, 'ಆತ ಯಾವಾಗ ಎದ್ದು ಹೋಗುತ್ತಾನೋ' ಎಂದು ಕಾಯತೊಡಗಿತು. ಆ ಬೆದರು ಬೊಂಬೆಯನ್ನೇ



ನೆಟ್ಟನೋಟದಿಂದ ನೋಡುತ್ತಿತ್ತು.

ಅದೇನು ಕಾರಣವೋ ಆ ಮೀನುಗಾರನಿಗೆ ಮೂರು ದಿನಗಳ ಕಾಲ ಆ ಕೊಳಕ್ಕೆ ಬರಲಿಕ್ಕೆ ಆಗಿರಲೇ ಇಲ್ಲ. ಆ ಮೂರೂ ದಿನಗಳ ಕಾಲ ಮೀನುಗಾರನು ಅಲ್ಲಿದ್ದಾನೆಂದೇ ಭಾವಿಸಿದ್ದ ಮೀಂಚುಳ್ಳಿಗೆ ಆ ಬೆದರುಬೊಂಬೆ ಒಮ್ಮೆಯೂ ಅಲ್ಲಾಡದೇ ಇದ್ದಲ್ಲಿಯೇ ಇದ್ದುದು ಗಮನಕ್ಕೆ ಬಂತು. ಸ್ವಲ್ಪ ಧೈರ್ಯ ತಂದುಕೊಂಡು, ನಿಧಾನಕ್ಕೆ ಆ ಬೆದರುಬೊಂಬೆಯ ಸುತ್ತ ಒಂದು ಸುತ್ತು ಹಾರಾಡಿ ಪರೀಕ್ಷಿಸಿತು. ಅದೊಂದು ಕೇವಲ ಹುಲ್ಲಿನ ಬೊಂಬೆ ಎಂದು ಅದಕ್ಕೆ ಗೊತ್ತಾಗಿ ಇನ್ನಷ್ಟು ಧೈರ್ಯ ಬಂತು. ಮೂರು ದಿನಗಳ ಕಾಲ ಉಪವಾಸವಿದ್ದುದರಿಂದ ಸರ್‍ರನೇ

ಕೊಳಕ್ಕೆ ಧುಮುಕಿ ಸಾಕಷ್ಟು ಮೀನುಗಳನ್ನು ಹಿಡಿದು ತಿಂದಿತು.

ಹೊಟ್ಟೆ ತುಂಬಿದ ಬಳಿಕ ಸುಮ್ಮನಿರದೆ ಆ ಮೀಂಚುಳ್ಳಿ ಆ ಹುಲ್ಲಿನ ಬೊಂಬೆಯ ಮೇಲೆ ಕುಳಿತು, ''ಇದು ಕೇವಲ ಬೆರ್ಚಪ್ಪ! ನಿಜವಾದ ಮೀನುಗಾರನಲ್ಲ. ಬರೀ ಕಪಟ, ಬರೀ ಕಪಟ,'' ಎಂದು ಕೂಗತೊಡಗಿತು. ಇದು ಹೀಗೆಯೇ ಕೆಲವು ಕಾಲ ಮುಂದುವರೆಯಿತು. ಮೀಂಚುಳ್ಳಿಗೆ ಈಗ ಹೆದರಿಕೆಯೇ ಇರಲಿಲ್ಲ.

ಕೆಲವು ದಿನಗಳ ನಂತರ ಮೀನು ಹಿಡಿಯಲು ಕೊಳಕ್ಕೆ ಮರಳಿದ ಮೀನುಗಾರ ದೂರದಿಂದಲೇ ಮೀಂಚುಳ್ಳಿ ಬೆರ್ಚಪ್ಪನ ಮೇಲೆ ಕುಳಿತು, ''ಇದು ಕೇವಲ ಬೆರ್ಚಪ್ಪ! ನಿಜವಾದ ಮೀನುಗಾರನಲ್ಲ. ಬರೀ ಕಪಟ, ಬರೀ ಕಪಟ'' ಎಂದು ಕೂಗತೊಡಗಿದ್ದನ್ನು ಗಮನಿಸಿದ. ಅವನಿಗೆ ಸಿಟ್ಟು ಬಂತು.





ಹೇಗಾದರೂ ಮೀಂಚುಳ್ಳಿಯನ್ನು ಹಿಡಿದುಕೊಂಡು ಹೋಗಬೇಕು ಎಂದುಕೊಂಡು ಅದು ಮೀನು ತಿಂದು ದೂರ ಎಲ್ಲೋ ಹಾರಿಹೋಗುವವರೆಗೆ ಕಾದಿದ್ದು ಆ ಹುಲ್ಲಿನ ಬೊಂಬೆಯನ್ನು ಪೊದೆ ಹಿಂದೆ ಅಡಗಿಸಿಟ್ಟು, ಅದರ ಟೋಪಿಯನ್ನು ಹಾಕಿಕೊಂಡು, ಬೆರ್ಚಪ್ಪನ ಜಾಗದಲ್ಲಿ ತಾನು ಬಂದು ಅಲ್ಲಾಡದೇ ನಿಂತ !

ಈ ಬದಲಾವಣೆಯ ಅರಿವಿಲ್ಲದ ಮೀಂಚುಳ್ಳಿ ಎಂದಿನಂತೆ ಮೀನು ಹಿಡಿಯಲು ಕೊಳಕ್ಕೆ ಧುಮುಕಿ, ಹೊಟ್ಟೆ ತುಂಬಾ ತಿಂದು, ಕೊಕ್ಕಿನಲ್ಲಿಯೂ ಕೆಲವು ಮೀನುಗಳನ್ನು ಹಿಡಿದುಕೊಂಡು ಬಂದು ಬೆರ್ಚಪ್ಪನಂತೆ ಕಾಣುತ್ತಿದ್ದ ಮೀನುಗಾರನ ಭುಜದ ಮೇಲೆ ಕುಳಿತು, ''ಇದು ಕೇವಲ ಬೆರ್ಚಪ್ಪ! ನಿಜವಾದ ಮೀನುಗಾರನಲ್ಲ. ಬರೀ ಕಪಟ, ಬರೀ ಕಪಟ'' ಎಂದು ಕೂಗತೊಡಗಿತು. ಕೂಡಲೇ ಅದನ್ನು ಹಿಡಿದುಕೊಂಡ ಮೀನುಗಾರ, ''ನಾನು ಬೆರ್ಚಪ್ಪನೂ ಅಲ್ಲ, ಇದು ಕಪಟವೂ ಅಲ್ಲ. ಇನ್ನು ನಿನ್ನಾಟ ನಡೆಯೋಲ್ಲ, ಬಾ'' ಎಂದು ಅದನ್ನು ಎತ್ತಿಕೊಂಡು ಮನೆಗೆ ಒಯ್ದ. ಮೀಂಚುಳ್ಳಿಗೆ ಬಿಡುಗಡೆ ಸಾಧ್ಯವಾಗಲೇ ಇಲ್ಲ!

ನಿನ್ನ ಪ್ರತಾಪ ಇಷ್ಟೇನಾ ?

ಕೆಲವರು ತಮ್ಮ ದೇಹವನ್ನು ಚೆನ್ನಾಗಿ ಬೆಳೆಸಿ ಸುಂದರವಾಗಿ ಕಾಣಿಸುತ್ತಾರೆ. ಮತ್ತೆ ಕೆಲವರು ತಮ್ಮ ಬುದ್ಧಿಶಕ್ತಿಯಿಂದ ಎಲ್ಲರ ಗಮನ ಸೆಳೆಯುತ್ತಾರೆ. ಬರೀ ದೇಹ ಮಾತ್ರ ಬೆಳೆದರೆ ಸಾಲದು. ಬುದ್ಧಿಯೂ ಜೊತೆ ಜೊತೆಗೇ ಬೆಳೆಯಬೇಕು. ದೈತ್ಯ ದೇಹವಿದ್ದರೂ ಬುದ್ಧಿ ಇಲ್ಲದೇ ಇದ್ದರೆ ಅನಾಯಾಸವಾಗಿ ಬಲಿಯಾಗ್ತೇವೆ ಅನ್ನುವ ಕಥೆ ಇಲ್ಲಿದೆ.

ಚೀನಾದ ಗೀಝೂ ಪ್ರಾಂತ್ಯದಲ್ಲಿ ಕತ್ತೆಗಳೇ ಇರಲಿಲ್ಲವಂತೆ! ಒಂದಾನೊಂದು ದಿನ ಮರಿ ಕತ್ತೆಯೊಂದನ್ನು ಯಾರೋ ಒಬ್ಬರು ಎಲ್ಲಿಂದಲೋ ತಂದು ಅಲ್ಲಿ ಬಿಡುವವರೆಗೆ ಅಲ್ಲಿ ಕತ್ತೆಗಳ ಸುಳಿವೂ ಇರಲಿಲ್ಲ!

ಗೀಝೂ ಕಾಡಿನಲ್ಲಿದ್ದ ಹುಲಿಗಳು ಎಂದೆಂದೂ ಕತ್ತೆಯನ್ನು ನೋಡಿರಲಿಲ್ಲ! ಒಂದಾನೊಂದು ಹುಲಿ ಈ ಮರಿ ಕತ್ತೆಯನ್ನು ನೋಡಿದ್ದೇ ತಡ ಕರ್ರಗೆ ಆಕರ್ಷಕವಾಗಿದ್ದ ಅದನ್ನು ಒಂದು ರಾಕ್ಷಸನೆಂದು ಭಾವಿಸಿ, ಹೆದರಿಕೊಂಡು ಓಡಿಹೋಗಿ ಪೊದೆಯೊಂದರಲ್ಲಿ ಬಚ್ಚಿಟ್ಟುಕೊಂಡು, ದೂರದಿಂದಲೇ ಆ ಕತ್ತೆಯ ಚಲನವಲನಗಳನ್ನು ಗಮನಿಸತೊಡಗಿತು.

ಇದ್ದಕ್ಕಿದ್ದ ಹಾಗೆ ಆ ಕತ್ತೆ ಅರಚಲು ಆರಂಭಿಸಿತು. ಮೊದಲೇ ಹೆದರಿದ್ದ ಹುಲಿಗೆ ಆ ಅರಚಾಟ ಭಯಂಕರ ಕೇಕೆಯಂತೆ

ಕೇಳಿಸಿ, ಅದು ತನ್ನನ್ನು ತಿನ್ನಲೆಂದೇ ಹೂಂಕರಿಸುತ್ತಾ ಇತ್ತ ಬರುತ್ತಿದೆ ಎಂದು ಭಾವಿಸಿ, ಬಾಲ ಮುದುರಿಕೊಂಡು ಅಲ್ಲಿಂದ ಕಾಡಿನೊಳಗೆ ಓಟ ಕಿತ್ತಿತು.

ಎಷ್ಟೋ ದೂರ ಓಡಿದ ಮೇಲೆ ಹುಲಿ ನಿಂತು, ಸುಧಾರಿಸಿಕೊಂಡು, ಕತ್ತೆ ಇನ್ನೂ ಬೆನ್ನಟ್ಟಿಕೊಂಡು ಬರುತ್ತಿದೆಯೇ ? ಎಂದು ತಿರುಗಿ ನೋಡಿತು. ಸದ್ಯ, ಅಲ್ಲೆಲ್ಲೂ ಕತ್ತೆಯನ್ನು ಕಾಣದೆ



ನೆಮ್ಮದಿಯ ಉಸಿರಾಡಿತು. ಅದು ತನ್ನನ್ನೇಕೆ ಬೆನ್ನತ್ತಿ ಬರಲಿಲ್ಲ? ಎಂಬ ಕುತೂಹಲದಿಂದ ತಿರುಗಿ ಆ ಕತ್ತೆ ಇರುವೆಡೆಗೆ ಸದ್ದಿಲ್ಲದೇ ಬಂದಿತು. ತನ್ನ ಪಾಡಿಗೆ ತಾನು ಹುಲ್ಲು ಮೇಯುತ್ತಾ ನಿಂತಿದ್ದ ಕತ್ತೆಯನ್ನು ನೋಡಿ, ಈಗ ಹುಲಿಗೆ ಸ್ವಲ್ಪ ಧೈರ್ಯ ಬಂತು. ಅದು ತನಗೇನೂ ಕೇಡು ಮಾಡದು ಎಂಬ ಭಂಡ ಧೈರ್ಯದಿಂದ ಕತ್ತೆಯ ಹತ್ತಿರಕ್ಕೆ ಬಂತು.

ನಿಧಾನವಾಗಿ ಕತ್ತೆಯನ್ನು ಸಮೀಪಿಸಿದ ಹುಲಿ, ತನ್ನೆಲ್ಲಾ ಧೈರ್ಯವನ್ನು ಒಟ್ಟುಗೂಡಿಸಿ ಮೆಲ್ಲಗೆ ಕತ್ತೆಗೊಂದು ಢಿಕ್ಕಿ ಕೊಟ್ಟಿತು. ಕತ್ತೆಗೆ ಅದು ತಮಾಷೆ ಎನಿಸಿ ಹಲ್ಲು ಕಿರಿಯಿತು. ಹುಲಿ ಅದನ್ನು ಆಹ್ವಾನವೆಂದು ಭಾವಿಸಿ ತನ್ನ ಮುಂಗೈನಿಂದ ಕತ್ತೆಯ ಬೆನ್ನು ತಟ್ಟಿತು.

ಕತ್ತೆಗೆ ಇದರಿಂದ ಕಿರಿಕಿರಿಯಾಯ್ತು. ಹುಲಿಗೆ ಚೆನ್ನಾಗಿ ಪಾಠ ಕಲಿಸಲು ತನ್ನ ಹಿಂಗಾಲುಗಳನ್ನೆತ್ತಿ ಒದೆಯಲು ನೋಡಿತು. ಒದೆತ ತಪ್ಪಿಸಿಕೊಂಡ ಜಾಣ ಹುಲಿ, ''ಆಹಾ, ಇಷ್ಟೇನಾ ನಿನ್ನ ಪ್ರತಾಪ! ನಾನೇನೋ ಭಾರೀ ರಾಕ್ಷಸ ಅಂದುಕೊಂಡಿದ್ದೆ ನಿನ್ನ'' ಎಂದು ಹೇಳಿ ಕತ್ತೆಯ ಮೇಲೆರಗಿ, ಕೊಂದು, ರಕ್ತ ಹೀರಿ, ಹೊಟ್ಟೆತುಂಬಾ ತಿಂದು ತೇಗಿತು!

ಬರೀ ದೇಹ ಬೆಳೆದರೆ ಸಾಲದು, ಬುದ್ಧಿಯೂ ಬೆಳೆಯ ಬೇಕು, ಅಲ್ವೇ?

ಮಾಂತ್ರಿಕ ಮೀನು !

'ಜನಮರುಳೋ, ಜಾತ್ರೆ ಮರುಳೋ...' ಅನ್ನುವ ಗಾದೆ ನೀವು ಕೇಳಿದ್ದೀರಿ, ಅಲ್ವಾ? ಅಂತಹ ಜನಗಳ ಮರುಳುತನ ಕುರಿತು ಒಂದು ಕಥೆ ಇದು.

ಚೀನಾದ ಬೆಟ್ಟಪ್ರದೇಶಗಳ ತಪ್ಪಲಿನ ಒಂದು ಸುಂದರ ಹಳ್ಳಿ. ಅಲ್ಲಿನ ಹಾದಿ ಬದಿಯ ಮರವೊಂದರ ದೊಡ್ಡ ಬೊಡ್ಡೆಯಲ್ಲಿ ಮಳೆಯ ನೀರು ನಿಂತು ತೊಟ್ಟಿಯಂತಾಗಿತ್ತು. ಮರ ನೆಲದಿಂದ ಮೂರ್ನಾಲ್ಕು ಅಡಿ ಎತ್ತರದವರೆಗೆ ನೇರವಾಗಿ ಬೆಳೆದು, ಸ್ವಲ್ಪ ಅಡ್ಡಲಾಗಿ ತಿರುಗಿ ಎರಡು ಅಥವಾ ಮೂರಡಿ ಹರಡಿ, ಅಲ್ಲಿಂದ ಮತ್ತೆ ನೇರವಾಗಿ, ಬೃಹತ್ತಾಗಿ ಬೆಳೆದಿತ್ತು. ಆ ಬಗ್ಗಿದ ಭಾಗದಲ್ಲಿ ಪೊಟರೆಯಿದ್ದು ಅಲ್ಲಿ ನೀರು ನಿಂತಿದ್ದರಿಂದ ಪುಟ್ಟ ಕೊಳದಂತಾಗಿತ್ತು.

ಒಂದು ದಿನ ಒಬ್ಬಾನೊಬ್ಬ ಬೆಸ್ತ ಮೀನು ಮಾರಲಿಕ್ಕೆ ಅಂತ ಮೀನು ತುಂಬಿದ್ದ ಬುಟ್ಟಿ ಹೊತ್ತು ಆ ದಾರಿಯಲ್ಲಿ ಬರುತ್ತಿದ್ದ. ಆ ಮೀನುಗಳ ರಾಶಿಯಲ್ಲಿ ಒಂದು ಮೀನು ಇನ್ನೂ ಜೀವದಿಂದಿತ್ತು. ಪಟ ಪಟ ಒದ್ದಾಡುತ್ತಿತ್ತು. ಅದರ ಒದ್ದಾಟವನ್ನು ನೋಡಿದ ಮೀನುಗಾರ ಕನಿಕರದಿಂದ ಆ ಕುಟುಕು ಜೀವವಿದ್ದ ಮೀನನ್ನು ಆ ಮರದ ಪೊಟರೆಯ ನೀರಿನಲ್ಲಿ ಬಿಟ್ಟ. ಮೀನು ಮರದ ಬೊಡ್ಡೆಯ ನೀರಿನಲ್ಲಿ ಆನಂದದಿಂದ ಈಜಾಡತೊಡಗಿತು.

ಸ್ವಲ್ಪ ಹೊತ್ತಿನ ಬಳಿಕ ಆ ಪೊಟರೆಯ ಬಳಿ ಬಂದ

ಹಾದಿಹೋಕನೊಬ್ಬ ಆ ಮಳೆಯ ನೀರಿನಲ್ಲಿ ಜೀವಂತ ಮೀನು ಆಡಿಕೊಂಡಿರುವುದನ್ನು ನೋಡಿ "ಓಹೋ! ಇದು ಮಾಂತ್ರಿಕ ಮೀನು. ಪವಾಡದ ಮೀನೇ ಇರಬೇಕು. ಇಲ್ಲದಿದ್ದರೆ ಹಾದಿ ಬದಿಯ ಈ ಮರದ ಬೊಡ್ಡೆಯಲ್ಲಿ ಹೇಗೆ ಬರುತ್ತಿತ್ತು?" ಎಂದು ಆಶ್ಚರ್ಯಪಟ್ಟ.

ಮಾಂತ್ರಿಕ ಮೀನು ಮರದ ಬೊಡ್ಡೆಯಲ್ಲಿ ಆಟವಾಡಿ



ಕೊಂಡಿರುವ ಸುದ್ದಿ ಬಾಯಿಂದ ಬಾಯಿಗೆ ಬಲು ಬೇಗ ಹರಡಿತು. ಅದೊಂದು ಪವಾಡ ಎಂದೇ ಬಣ್ಣಿತವಾಯಿತು! ಈ ಅದ್ಭುತ ಪವಾಡದ ಮೀನನ್ನು ನೋಡಲು ಜನ ದೂರ ದೂರದ ಕಡೆಗಳಿಂದ ಬಂದರು. ಊದು ಬತ್ತಿ ಹಚ್ಚಿ ಪೂಜೆ ಮಾಡಿದರು. ಆರತಿ ಎತ್ತಿದರು. ಧೂಪ ಹಾಕಿದರು. ಮಂಡಿಯೂರಿ ಪ್ರಾರ್ಥಿಸಿದರು. ತಮ್ಮ ಭಕ್ತಿ ಸಮರ್ಪಿಸಿದರು. ದೇವರು ಮೀನನ್ನು ತಮ್ಮ ಊರಿನ ಆ ಮರದಲ್ಲಿಯೇ ಕರುಣಿಸಿದ್ದಕ್ಕೆ ಧನ್ಯವಾದ ಅರ್ಪಿಸಿದರು.

ಈ ಮಾಂತ್ರಿಕ ಮೀನಿನ ಮಹಾತ್ಮೆ ಸುತ್ತಮುತ್ತಲಿನ ಪ್ರಾಂತ್ಯಗಳಲ್ಲಿ ಹರಡಿ ಜನ ತಂಡೋಪತಂಡವಾಗಿ ಜಾತ್ರೆಗೆ ಬಂದವರಂತೆ ಬಂದು ಪೂಜೆಗೆ ನಿಂತರು. ಇದಾವುದರ ಅರಿವೂ ಇಲ್ಲದ ಆ ಬೆಸ್ತ, ಅದೇ ಮೀನನ್ನು ಆ ಬೊಡ್ಡೆಯಲ್ಲಿ ಬಿಟ್ಟಿದ್ದನಲ್ಲ, ಆತ, ಕೆಲವು ದಿನಗಳ ಬಳಿಕ ಮತ್ತೆ ಆ ದಾರಿಯಲ್ಲಿ ಬಂದ. ನೋಡುತ್ತಾನೆ, ಜನವೋ ಜನ! ಎಲ್ಲರೂ ಆ ಮರದ ಬೊಡ್ಡೆಗೆ, ಮೀನಿಗೆ ಕೈಮುಗಿಯುವವರೇ! ಎಂಥಾ ಪವಾಡದ ಮೀನು, ದಿವ್ಯಶಕ್ತಿಯ ಮೀನು ಎಂದು ಹೊಗಳುವವರೇ!

ಇದನ್ನೆಲ್ಲಾ ನೋಡಿದ ಆ ಬೆಸ್ತನಿಗೆ ನಗು ಬಂತು. ''ಅಯ್ಯೋ ಮರುಳು ಜನಗಳೇ! ಅದೇನು ದಿವ್ಯಶಕ್ತಿಯ ಮೀನು ಅಲ್ಲ. ಕಳೆದ ವಾರ ನಾನು ಈ ಕಡೆ ಬಂದಿದ್ದಾಗ ನನ್ನ ಬುಟ್ಟಿಯಲ್ಲಿ ಇನ್ನೂ ಜೀವ ಇದ್ದ ಕೊರವ ಮೀನಿತ್ತು. ಬದುಕಿಕೊಳ್ಳಲಿ ಪಾಪ, ಅಂತ ಅದನ್ನು ಇಲ್ಲಿ ಬಿಟ್ಟಿದ್ದೆ, ಅಷ್ಟೆ'' ಎಂದು ಹೇಳಿ ಬೊಡ್ಡೆಯ ನೀರಿಗೆ ಕೈ ಹಾಕಿ, ಆ ಮೀನನ್ನು ಹಿಡಿದು, ತನ್ನ ಬುಟ್ಟಿಯಲ್ಲಿ



ಹಾಕಿಕೊಂಡು ಹೊರಟೇ ಹೋದ !

ದೂರ ದೂರದಿಂದ ಭಕ್ತಿ ಸಮರ್ಪಿಸಲು ಬಂದಿದ್ದ ಆ ಜನಜಂಗುಳಿ ಬೆಪ್ಪರಾಗಿ ಒಬ್ಬರ ಮುಖ ಒಬ್ಬರು ನೋಡುತ್ತಾ ನಿಂತರು. ತಮ್ಮ ಪೆದ್ದುತನಕ್ಕೆ ನಾಚಿಕೆಪಟ್ಟರು.

ಸೆರೆ ಸಹವಾಸ - ಸೆರೆವಾಸ

ನೀವು ಮಂಗ, ಗೋರಿಲ್ಲ ಮತ್ತು ಚಿಂಪಾಜಿಗಳನ್ನು ನೋಡಿದ್ದೀರಲ್ಲವೇ ? ಹಾಗೆಯೇ ಮನುಷ್ಯರನ್ನೇ ಹೋಲುವ ಮತ್ತೊಂದು ಪ್ರಾಣಿ ಒರಾಂಗುಟಾನ್. ಸ್ವಲ್ಪ ಮಾತ್ರ ಬುದ್ಧಿ ಬೆಳೆದ ಒರಾಂಗುಟಾನ್‌ಗಳ ಕಥೆ ಇಲ್ಲಿದೆ, ಕೇಳಿ.

ಚೀನಾದ ದಕ್ಷಿಣ ಪ್ರಾಂತ್ಯದ ಗುಡ್ಡಗಾಡುಗಳಲ್ಲಿ ಒರಾಂಗುಟಾನ್‌ಗಳ ಗುಂಪೊಂದಿತ್ತು. ಇವು ಹೆಂಡ ಕುಡಿಯುವುದು, ಮನುಷ್ಯರಂತೆಯೇ ವರ್ತಿಸುವುದು, ತುಂಟತನ ಮಾಡುವು ದರಲ್ಲೇ ಆಸಕ್ತವಾಗಿದ್ದವು. ಯಾರೋ ಒಬ್ಬ ಮಂಗಗಳನ್ನು ಹಿಡಿಯುವವ ಒಮ್ಮೆ ಆ ಕಾಡಿನ ಅಂಚಿನಲ್ಲಿ ಒಂದು ದೊಡ್ಡ ಬಿಂದಿಗೆ ಹೆಂಡವನ್ನು, ಒಂದಷ್ಟು ಹುಲ್ಲಿನಿಂದ ಮಾಡಿದ್ದ ಚಪ್ಪಲಿಗಳನ್ನು, ಇಟ್ಟು ಹೋಗಿದ್ದ. ಗಟ್ಟಿ ದಾರದಿಂದ ಆ ಚಪ್ಪಲಿಗಳು ಒಂದಕ್ಕೊಂದು ಬಿಗಿಯಲ್ಪಟ್ಟಿದ್ದವು.

ಮಂಗ್ಯಾಗಳಂತೆ ಆಡುವ ಆ ಒರಾಂಗುಟಾನ್‌ಗಳಿಗೆ ಆ ಹೆಂಡದ ಬಿಂದಿಗೆ ಮತ್ತು ಚಪ್ಪಲಿಗಳು ತಮ್ಮನ್ನು ಹಿಡಿಯಲು ಹೆಣೆದಿರುವ ಬಲೆ ಅಂತ ಕೂಡಲೇ ಗೊತ್ತಾಯಿತು. ತಮ್ಮ ಹೆಂಡಕುಡುಕತನವನ್ನು ಬಳಸಿ ಸೆರೆಹಿಡಿಯುವ ಆ ವಾನರ ಬೇಟೆಗಾರನ ಜಾಣತನಕ್ಕೆ ತಲೆದೂಗಿ ಆ ಗಡಿಗೆಯ ಬಳಿ ಹೋಗಲೇ ಇಲ್ಲ!



ಒಂದು ದಿನ ಕಳೆಯುವಷ್ಟರಲ್ಲೇ ಹುಳಿ ಹೆಂಡದ ವಾಸನೆ ಸುತ್ತಲೂ ಹರಡತೊಡಗಿತು. ತುಂಟ ಒರಾಂಗುಟಾನ್‌ಗಳ ಮೂಗು ಎಷ್ಟು ಹೊತ್ತು ಅಂತ ಸುಮ್ಮನಿದ್ದೀತು, ಹೇಳಿ? ವಾಸನೆಯ ಬಲವಾದ ಸೆಳೆತಕ್ಕೆ ಸಿಕ್ಕಿ ನಿಧಾನಕ್ಕೆ ಅವು ಆ ಹೆಂಡದ ಗಡಿಗೆಯ ಹತ್ತಿರ ಹೋದವು. ಕುಡಿದರೆ ಅಪಾಯ ಅಂತ ಗೊತ್ತಿದ್ದರೂ ಗಡಿಗೆಯನ್ನು ಬಿಟ್ಟು ಹೋಗಲು ಮನಸ್ಸು ಬರಲಿಲ್ಲ!

ಈ ಸಂಕಟದ ಪರಿಸ್ಥಿತಿಯನ್ನು ಗಮನಿಸಿದ ಹಿರಿಯ ಒರಾಂಗುಟಾನ್, "ಅಲ್ಲಾ, ಹೆಂಡ ಏನೋ ಚೆನ್ನಾಗಿರೋ

ಹಾಗಿದೆ. ರುಚಿ ಮಾತ್ರ ನೋಡೋಣ, ಅಷ್ಟೆ. ಕುಡಿದು ಮತ್ತೇರಿ ಸೆರೆಯಾಗುವುದು ಬೇಡ, ಆಯ್ತಾ? ಆದರೂ ಹುಷಾರಿ, ನೋಡಿ, ಎಲ್ಲರೂ ಸ್ವಲ್ಪ ಮಾತ್ರ ರುಚಿ ನೋಡೋಣ, ಯಾವುದೇ ಕಾರಣಕ್ಕೂ ಕುಡಿದು ಜ್ಞಾನ ತಪ್ಪದಂತೆ ಎಚ್ಚರವಹಿಸಿ, ಬನ್ನಿ'' ಎಂದು ಎಲ್ಲರನ್ನೂ ಕರೆಯಿತು.

ಸರಿ, ಸ್ವಲ್ಪ ಸ್ವಲ್ಪವೇ ರುಚಿ ನೋಡಿದವು ಒರಾಂಗುಟಾನ್ ಗಳು! ಸ್ವಲ್ಪ ಸ್ವಲ್ಪವೇ ಹೆಂಡದ ಪ್ರಮಾಣವೂ ಏರುತ್ತಾ ಹೋಯಿತು! ಹುಳಿ ಹೆಂಡದ ರುಚಿ ನೋಡುತ್ತಾ ನೋಡುತ್ತಾ ಗಡಿಗೆಯನ್ನು ಖಾಲಿ ಮಾಡಿಯೇಬಿಟ್ಟವು! ಅಮಲೇರದೇ ಇದ್ದೀತೇ? ಹೊಟ್ಟೆತುಂಬಾ ಹೆಂಡ ಕುಡಿದು ಮತ್ತೇರಿದ ಈ ನರವಾನರಗಳು ತಮ್ಮ ಮಂಗ್ಯಾಟ ಸುರು ಮಾಡಿದವು. ಹುಲ್ಲಿನ ಚಪ್ಪಲಿಗಳನ್ನು ಮೆಟ್ಟಿಕೊಂಡು, ತೂರಾಡುತ್ತಾ ಮನುಷ್ಯರಂತೆಯೇ ಅಡ್ಡಂಬಡ್ಡ ಕಾಲು ಹಾಕತೊಡಗಿದವು. ಕೂಗಾಡುತ್ತಾ ಜಂಭದಿಂದ ನಡೆಯ ತೊಡಗಿದವು. ಚಪ್ಪಲಿಗಳು ಪರಸ್ಪರ ಕಟ್ಟಲ್ಪಟ್ಟಿದ್ದರಿಂದ ಹೆಚ್ಚು ದೂರ ನಡೆಯಲಾಗದೆ ಒಂದರ ಮೇಲೊಂದು ಧೊಪ್ಪನೇ ಬಿದ್ದು ಗುದ್ದಾಡತೊಡಗಿದವು.

ದೂರದಿಂದಲೇ ಇವುಗಳನ್ನು ಗಮನಿಸುತ್ತಿದ್ದ ವಾನರಗಳ ಬೇಟೆಗಾರರು ಒಟ್ಟಾಗಿ ಬಂದು ತೂರಾಡುತ್ತಿದ್ದ ಒರಾಂಗುಟಾನ್ ಗಳನ್ನು ಹಿಡಿದುಕೊಂಡರು. ಓಡಿ ತಪ್ಪಿಸಿಕೊಳ್ಳಲು ಅವು ಎಷ್ಟೇ ಪ್ರಯತ್ನಪಟ್ಟರೂ ಚಪ್ಪಲಿಗಳು ಒಂದೊಕ್ಕೊಂದು ಬಂಧಿಸಲ್ಪಟ್ಟಿದ್ದರಿಂದ ಅವುಗಳಿಗೆ ಸೆರೆಯಷ್ಟೇ ಗತಿಯಾಯಿತು. ಸೆರೆ ಕುಡಿದ ಮಂಗಗಳಿಗೆ ಸೆರೆಯಲ್ಲದೇ ಬೇರೇನು ಗತಿ ಹೇಳಿ?

ಅನುಮಾನಂ ಪೆದ್ದರೋಗಂ

ಕೆಲವರಿಗೆ ಇತರರನ್ನು ತುಂಬಾ ಅನುಮಾನದಿಂದ ನೋಡುವ ಅಭ್ಯಾಸ ಇರುತ್ತದೆ. ಕುತೂಹಲಕಾರಿ ವಿಷಯ ಗಳನ್ನು ತಿಳಿದುಕೊಳ್ಳಲು, ಹೆಚ್ಚಿನ ಮಾಹಿತಿ ಪಡೆಯಲು ನೀವು ಅನುಮಾನ ವ್ಯಕ್ತಪಡಿಸಬಹುದು. ಆದರೆ ಅನುಮಾನ ಯಾವಾಗಲೂ ಒಳ್ಳೆಯ ಪರಿಣಾಮವನ್ನೇ ತಂದೀಯುತ್ತದೆ ಎಂದೇನೂ ಇಲ್ಲ. ಸುಮ್ಮ ಸುಮ್ಮನೇ ಮತ್ತೊಬ್ಬರ ಮೇಲೆ ಅನುಮಾನ ಪಟ್ಟು ಅವರೊಂದಿಗೆ ಜಗಳ ಆಡುವ ಇಲ್ಲವೇ ಅವರ ಸ್ನೇಹ ಕಳೆದುಕೊಳ್ಳುವ ಸಾಧ್ಯತೆಗಳೂ ಇರುತ್ತವೆ. ಕೆಲವೊಮ್ಮೆ ಅನುಮಾನ ಬಂದರೂ ಹೇಳದೇ ತಾಳ್ಮೆಯಿಂದ ಮರುಪರಿಶೀಲನೆ ನಡೆಸಿದರೆ ಒಂದಲ್ಲಾ ಒಂದು ದಿನ ಸತ್ಯ ಏನು ಅಂತ ತಿಳಿಯುತ್ತದೆ ಮತ್ತು ಸುಮ್ಮನೇ ಅನುಮಾನ ಪಟ್ಟದ್ದಕ್ಕಾಗಿ ನಿಮ್ಮ ಮೇಲೆಯೇ ನಿಮಗೆ ಬೇಸರ ಉಂಟಾಗಬಹುದು. ಅಂತಹ ಒಂದು ಕಥೆ ಇಲ್ಲಿದೆ.

ಚೀನಾದ ಲೀ ಪೆಂಗ್ ಎಂಬ ಒಬ್ಬ ಹಳ್ಳಿಯವ ಒಮ್ಮೆ ತನ್ನ ಕೊಡಲಿಯನ್ನು ಎಲ್ಲಿಯೋ ಇಟ್ಟು ಮರೆತುಬಿಟ್ಟ. ಆದರೆ ಅವನ ನೆರೆಯವನ ಮಗನೇ ಅದನ್ನು ಕದ್ದು ಬಚ್ಚಿಟ್ಟಿರಬೇಕು ಅಂತ ಅನುಮಾನಪಟ್ಟ. ಅದೇನು ತಲೆಯಲ್ಲಿ ಹುಳ ಹೊಕ್ಕಿತೋ ಅವನಿಗೆ ತನ್ನ ಅನುಮಾನವೇ ಸರಿ ಅಂತ ಸಾಬೀತುಮಾಡಲು ಆ

ಹುಡುಗನನ್ನೇ ಗಮನಿಸುತ್ತಾ ಪತ್ತೇದಾರಿಕೆ ಮಾಡತೊಡಗಿದ. ಆ ಹುಡುಗ ನಡೆಯುವುದು, ಮಾತನಾಡುವುದು, ಕೂರುವುದು, ನಿಲ್ಲುವುದು ಎಲ್ಲವೂ ಅವನಿಗೆ ಕಳ್ಳನ ಚಹರೆಯಂತೆಯೇ ಕಂಡುಬರತೊಡಗಿದವು. ಅನುಮಾನದ ಹಳದೀ ಕನ್ನಡಕ ತೊಟ್ಟವರಿಗೆ ಎಲ್ಲವೂ ಹಳದಿಯಾಗಿಯೇ ತಾನೇ ಕಾಣುವುದು !

ಇದಾವುದರ ಪರಿವೆಯೂ ಇಲ್ಲದ ಆ ಹುಡುಗ ತನ್ನಷ್ಟಕ್ಕೆ ತಾನು ತನ್ನ ನಿತ್ಯದ ಕೆಲಸಗಳಲ್ಲಿ ತೊಡಗಿದ್ದ. ತನ್ನ ದಿನಚರಿಯನ್ನು ಬದಲಿಸಲು ಅವನೇನು ಕಳ್ಳತನ ಮಾಡಿರಲಿಲ್ಲವಲ್ಲಾ ?





ಹೀಗೇ ದಿನ ಕಳೆಯುತ್ತಿತ್ತು. ಹೀಗಿರಲು ಒಂದು ದಿನ ಲೀ ಪೆಂಗ್ ಹಳ್ಳಿಯ ಹತ್ತಿರದ ಬೆಟ್ಟದೋರೆಯ ಕಾಡಿನಲ್ಲಿ ಕಟ್ಟಿಗೆ ಕಡಿಯಲು ಹೋದ. ಅವನು ಕಟ್ಟಿಗೆ ಕಡಿದು ಒಟ್ಟು ಮಾಡುತ್ತಿದ್ದಾಗ ಅಲ್ಲಿಯೇ ಒಂದು ಪೊದೆಯಲ್ಲಿ ಕೊಡಲಿಯೊಂದು ಸಿಕ್ಕಿತು. ಅದು ಹಿಂದೆ ಆತ ಮರೆತುಬಿಟ್ಟು ಬಂದಿದ್ದ ಅವನದೇ ಕೊಡಲಿಯಾಗಿತ್ತು!

ಅಂದಿನಿಂದ ಅವನಿಗೆ ತನ್ನ ನೆರೆಯವನ ಮಗ ನಡೆಯುವುದು, ಮಾತನಾಡುವುದು, ಕೂರುವುದು, ನಿಲ್ಲುವುದು ಯಾವುದೂ ಕಳ್ಳನ ಚಹರೆಯಂತೆ ಕಂಡುಬರಲೇ ಇಲ್ಲ!

ಒಂದೇ ಏಟಿನಲ್ಲಿ ಎರಡು ಹುಲಿ ಹೊಡೆಯುವುದು !

ಚೀನಾದ ಗುಡ್ಡಗಾಡು ಪ್ರಾಂತ್ಯದ ಒಂದು ಹಳ್ಳಿಯಲ್ಲಿ ಗ್ವಾನ್ ಝುವಾಂಗ್‌ಜಿ ಮತ್ತು ಅವನ ನೆರೆಯವ ಒಂದು ದಿನ ಕಟ್ಟಿಗೆ ತರಲು ಬೆಟ್ಟದಾಚೆಯ ಕಾಡಿಗೆ ಹೋದರು. ದಾರಿಯಲ್ಲಿ ಒಂದು ಮೇಕೆಯನ್ನು ತಿನ್ನಲು ಎರಡು ಹುಲಿಗಳು ಪರಸ್ಪರ ಹೊಂಚು ಹಾಕಿ ಗುರುಗುಟ್ಟಿಕೊಂಡು ನೋಡುತ್ತಾ ಇದ್ದುದನ್ನು ಗಮನಿಸಿದರು.

ಗ್ವಾನ್ ಝುವಾಂಗ್‌ಜಿಗೆ ಆ ಎರಡೂ ಹುಲಿಗಳನ್ನೂ ಕೊಂದು ಹಾಕಬೇಕು ಎನ್ನುವಷ್ಟು ಕೋಪ ಬಂದು ತನ್ನ ಕೊಡಲಿ ಎತ್ತಿಕೊಂಡು ಅವುಗಳ ಬಳಿಗೆ ಹೊರಟೇಬಿಟ್ಟ! ಆದರೆ ಅವನ ನೆರೆಯವ, ''ಸ್ವಲ್ಪ ತಾಳಯ್ಯ. ನೋಡೋಣ ಇರು, ಈಗ ಹೋದ್ರೆ ಅಪಾಯ ತಪ್ಪಿದ್ದಲ್ಲ. ಸ್ವಲ್ಪ ತಾಳ್ಮೆಯಿಂದ ಕಾದು ನೋಡು'' ಎಂದು ಅವನನ್ನು ತಡೆದು ನಿಲ್ಲಿಸಿದ.

ಸರಿ, ಅಲ್ಲೇ ಮರವೊಂದರ ಮರೆಯಲ್ಲಿ ನಿಂತು ಮುಂದೇನಾಗುವುದೋ ಎಂದು ನೋಡಿದರು. ದೊಡ್ಡ ಹುಲಿ ಚಿಕ್ಕ ಹುಲಿಯ ಕುತ್ತಿಗೆಗೆ ಬಾಯಿಹಾಕಿ ಕೊಲ್ಲಲು ನೋಡಿದರೆ ಚಿಕ್ಕ ಹುಲಿ ದೊಡ್ಡ ಹುಲಿಯ ಮುಂಗಾಲುಗಳಿಗೆ ಬಲವಾಗಿ ಒದೆಯಿತು. ಪರಸ್ಪರ ಪಂಜಗಳಿಂದ ಕಿತ್ತಾಡಿದವು. ಚೂಪಾದ ಹಲ್ಲುಗಳಿಂದ

ಕಚ್ಚಿ ಗಾಯ ಮಾಡಿದವು. ಘನಘೋರ ಕಾಳಗ ಆದು !

ಕಾಳಗದಲ್ಲಿ ಗಾಯಗೊಂಡ ಚಿಕ್ಕ ಹುಲಿ ಸತ್ತೇಹೋಯಿತು ! ಆದರೆ ದೊಡ್ಡ ಹುಲಿಗೆ ವಿಪರೀತ ಗಾಯಗಳಾಗಿದ್ದರಿಂದ ನಿಲ್ಲಲಿಕ್ಕೂ ಆಗದೆ ನಿತ್ರಾಣಗೊಂಡು ತೂರಾಡತೊಡಗಿತು. ಅಂತಹ ಅಪೂರ್ವ ಕ್ಷಣಕ್ಕಾಗಿಯೇ ಕಾಯುತ್ತಿದ್ದ ಗ್ವಾನ್ ಝುವಾಂಗ್‌ಜಿ ಮಿಂಚಿನಂತೆ ಆ ದೊಡ್ಡ ಹುಲಿಯ ಮೇಲೆ ಎರಗಿ ಅದನ್ನು ಕೊಂದುಹಾಕಿದ.

ಹಳ್ಳಿಗರಿಗೆ ಹುಲಿಮಾಂಸದ ಔತಣ ಏರ್ಪಡಿಸಲು ಆ ಇಬ್ಬರು ಗೆಳೆಯರು ಎರಡೂ ಹುಲಿಗಳನ್ನು ಹೊತ್ತುಕೊಂಡು,





ಮೇಕೆಯನ್ನು ಎಳೆದುಕೊಂಡು ಹಳ್ಳಿಯ ಕಡೆಗೆ ಹೊರಟರು.

ಔತಣ ಭರ್ಜರಿಯಾಗೇ ಇತ್ತು. ಎರಡೆರಡು ಹುಲಿಗಳನ್ನು ಒಟ್ಟಿಗೇ ಹೊಡೆಯಲು ಹೇಗೆ ಸಾಧ್ಯ ಎಂದು ಎಲ್ಲರೂ ಕೇಳಿದಾಗ ತನ್ನ ನೆರೆಯವನ ಸಮಯೋಚಿತ ಸಲಹೆಯಿಂದ ಅದು ಸಾಧ್ಯವಾಯಿತು ಎಂಬುನ್ನು ಸಾದ್ಯಂತವಾಗಿ ವಿವರಿಸಿದ ಗ್ವಾನ್ ಝುವಾಂಗ್‌ಜಿ. ಹುಲಿ ಬೇಟೆಯ ಕಥೆ ಕೇಳಿದ ಹಳ್ಳಿಗರು ಮೆಚ್ಚಿ, ''ಆಹಾ! ಇದಕ್ಕೇ ಅನ್ನೋದು ನೋಡಿ, ಒಂದೇ ಕಲ್ಲಿನಿಂದ ಎರಡು ಹಕ್ಕಿ ಹೊಡೆಯೋದು, ಅಲ್ಲಲ್ಲ, ಒಂದೇ ಏಟಿನಿಂದ ಎರಡೆರಡು ಹುಲಿ ಹೊಡೆಯೋದು ಅಂತ,'' ಎಂದು ಇಬ್ಬರು ಗೆಳೆಯರ ಸಾಹಸವನ್ನು ಕೊಂಡಾಡಿದರು.

ಪ್ರತ್ಯಕ್ಷವಾದರೂ ಪರಾಂಬರಿಸಿ ನೋಡು

ಚೀನಾದ ಫೇಯ್ ರಾಜ್ಯದಲ್ಲಿ ಝೆಂಗ್‌ಜಿ ಎಂಬ ಸಭ್ಯ ಮನುಷ್ಯ ವಾಸವಾಗಿದ್ದ. ಒಂದು ದಿನ ಆತ ರಾಜಧಾನಿಗೆ ಯಾವುದೋ ಕೆಲಸಕ್ಕೆಂದು ಹೋಗಿದ್ದ. ಮತ್ತದೇ ರಾಜ್ಯದಲ್ಲಿ ಝೆಂಗ್‌ಜಿ ಇನ್ನೊಬ್ಬಾತನೂ ಇದ್ದ. ಆತ ದುಷ್ಟ, ಯಾರನ್ನೋ ಕೊಂದಿದ್ದನಂತೆ. ಕೊಲೆಗಾರನನ್ನು ಹಿಡಿದುಕೊಡಿ ಎಂದು ರಾಜ ಝೆಂಗ್‌ಜಿಯ ಹೆಸರಿರುವ ಭಿತ್ತಿಪತ್ರಗಳನ್ನು ಎಲ್ಲ ಕಡೆ ಅಂಟಿಸಲು ಆಜ್ಞೆ ಹೊರಡಿಸಿದ.

ಈ ಭಿತ್ತಿಪತ್ರವನ್ನು ನೋಡಿದ ಅದೇ ಝೆಂಗ್‌ಜಿಯ ಹಳ್ಳಿಯ ರೈತನೊಬ್ಬನಿಗೆ ಅದೇನೆಂದು ಸರಿಯಾಗಿ ಅರ್ಥವಾಗಲಿಲ್ಲ. ಆದರೆ ತನಗೇನೋ ಮಹಾ ಗೊತ್ತು ಅನ್ನುವವನ ಹಾಗೆ, ''ಫೇಯ್ ರಾಜ್ಯದಲ್ಲಿ ಝೆಂಗ್‌ಜಿ ಯಾರನ್ನೋ ಕೊಂದನಂತೆ,'' ಎಂದು ಮತ್ಯಾರಿಗೋ ಹೇಳಿದ. ಈ ಮಾತು ಕೇಳಿಸಿಕೊಂಡಾತ ಕೊಲೆಗಾರ ಝೆಂಗ್‌ಜಿ ಬೇರೆ, ಈ ಸಭ್ಯ ಝೆಂಗ್‌ಜಿ ಬೇರೆ ಎಂಬುದನ್ನು ತಿಳಿಯದೇ ಹಳ್ಳಿಗೆ ಹೋಗಿ ಸಭ್ಯ ಮನುಷ್ಯ ಝೆಂಗ್‌ಜಿಯ ತಾಯಿಯ ಬಳಿ, ''ಅಲ್ಲಿ, ಫೇಯ್ ರಾಜ್ಯದಲ್ಲಿ, ನಿನ್ನ ಮಗ ಝೆಂಗ್‌ಜಿ ಯಾರನ್ನೋ ಕೊಂದು ಹಾಕಿದ್ದಾನೆ ಅಂತ ಭಿತ್ತಿಪತ್ರ ಅಂಟಿಸಿದ್ದಾರೆ,'' ಎಂದು ಹೇಳಿದ.

''ಅದು ಸಾಧ್ಯವೇ ಇಲ್ಲ. ನನ್ನ ಮಗ ಅಂತಹದ್ದೇನನ್ನೂ

ಮಾಡೋದೇ ಇಲ್ಲ'' ಎಂದು ಝೆಂಗ್‌ಜಿಯ ತಾಯಿ ಹೇಳಿದಳು.

ಸ್ವಲ್ಪ ಹೊತ್ತಾದ ಮೇಲೆ ಇನ್ಯಾರೋ ಪಟ್ಟಣದಿಂದ ಬಂದವರು ಝೆಂಗ್‌ಜಿಯ ತಾಯಿಯ ಹತ್ತಿರ ಬಂದು ಅದೇ ವಿಷಯವನ್ನು ಹೇಳಿದ. ಆಕೆ ಮತ್ತೆ ಮೊದಲಿನಂತೆಯೇ ಉತ್ತರ ಕೊಟ್ಟು ಕಳಿಸಿದಳು.

ಹೀಗೆ ಒಬ್ಬೊಬ್ಬರೂ ಪಟ್ಟಣದಿಂದ ಹಳ್ಳಿಗೆ ಬರುವುದು, ಆಕೆಗೆ ಹೀಗೇ ಹೇಳುವುದು, ಆಕೆ ಮತ್ತೆ ಅದೇ ಉತ್ತರ ಕೊಡುವುದು ನಡೆದೇ ಇತ್ತು... ''ಅಲ್ಲ, ನಿನ್ನ ಮಗ ಝೆಂಗ್‌ಜಿ



ಅಲ್ಲಿ ಯಾರನ್ನೋ ಕೊಂದಿದ್ದಾನೆ. ನೀನು ನೋಡಿದರೆ ಇಲ್ಲಿ ಆರಾಮಾಗಿ ತಕಲಿಯಲ್ಲಿ ನೂಲು ತೆಗೆದು, ನೇಯುತ್ತಾ ಇದ್ದೀಯ. ಅಬ್ಬಾ, ಎಂಥಾ ಕರುಣೆಯಿಲ್ಲದ ತಾಯಿ !'' ಎಂದು ಹಂಗಿಸಿದ.

ಅಷ್ಟು ಹೊತ್ತು ಅದು ತನ್ನ ಮಗ ಅಲ್ಲ, ಅವನು ಅಂತಹದ್ದೇನನ್ನೂ ಮಾಡುವುದೇ ಇಲ್ಲ ಎಂದು ಹೇಳುತ್ತಾ ಬಂದ ಆಕೆಗೆ, ''ಇವರೆಲ್ಲಾ ಒಬ್ಬರಾದ ನಂತರ ಒಬ್ಬರು ಬಂದು ಹೀಗೆ ಹೇಳಿರಬೇಕಾದರೆ ಅದು ಸತ್ಯವೇ ಇರಬೇಕು,'' ಎಂದು ಅನ್ನಿಸ ತೊಡಗಿತು. ''ಅಕಸ್ಮಾತ್ ಅದು ನಿಜವೇ ಆಗಿದ್ದರೆ ರಾಜಭಟರು ತನ್ನನ್ನೂ ಬಂಧಿಸಿ ಸೆರೆಗೆ ಹಾಕಬಹುದು,'' ಎಂದು ಹೆದರಿಕೊಂಡು ನೇಯ್ಗೆಯ ಲಾಳಿಯನ್ನು ಮತ್ತು ತಕಲಿಯನ್ನು ಅಲ್ಲೇ ಬಿಸಾಡಿ ಆ ಹಳ್ಳಿಯಿಂದ ದೂರದ ಪ್ರಾಂತ್ಯಕ್ಕೆ ಯಾರ ಕಣ್ಣಿಗೂ ಬೀಳದಂತೆ ಪರಾರಿಯಾದಳು !

ಪ್ರತ್ಯಕ್ಷವಾಗಿದ್ದರೂ ಪರಾಂಬರಿಸಿ ನೋಡಬೇಕು ಎಂದು ಹೇಳುವುದು ಇದಕ್ಕೇ. ಅವರಿವರೆಂದ ಮಾತ್ರಕ್ಕೇ ಅದು ನಿಜವೇ ಆಗಿರಬೇಕೆಂದೇನಿಲ್ಲ. ಸ್ವಲ್ಪ ತಾಳ್ಮೆ ತಂದುಕೊಂಡು ತನ್ನ ಮಗ ಝೆಂಗ್‌ಜಿ ಬರುವವರೆಗೆ ಕಾದು ನೋಡಿದ್ದರೆ ಅದು ಸುಳ್ಳು, ಬರೀ ಗಾಳಿ ಸುದ್ದಿ ಎಂದು ಆಕೆಗೆ ತಿಳಿಯುತ್ತಿತ್ತು. ಹೆದರಿಕೆಯ ಕೈಗೆ ಬುದ್ಧಿ ಕೊಟ್ಟ ಆಕೆ ಆ ಹಳ್ಳಿಯಿಂದ ದೂರವಾದಳು. ಹೀಗಾಗಬಾರದಿತ್ತು, ಅಲ್ಲವೇ ?

ಹಾವಿಗೆ ಕಾಲು ಜೋಡಿಸುವುದು !

ಚೀನಾದ ಗಿಝು ಪ್ರಾಂತ್ಯದಲ್ಲಿ ಒಮ್ಮೆ ಒಂದಷ್ಟು ಜನ ಗುಂಪು ಸೇರಿ ತಮ್ಮನ್ನು ತುಂಬಾ ಬುದ್ಧಿವಂತರು ಎಂದು ಭಾವಿಸಿ ತಾವೇ ಮೇಲು ಎಂದು ಸಾಧಿಸಲು ತವಕಿಸುತ್ತಿದ್ದರು. ಅವರಲ್ಲಿ ಒಂದು ಫ್ಲಾಸ್ಕ್ ತುಂಬಾ ಹಳೆಯ ವೈನ್ ಇತ್ತು. ಅದನ್ನು ತಾನೇ ಕುಡಿಯಬೇಕು ಎಂದು ಅಲ್ಲಿದ್ದ ಪ್ರತಿಯೊಬ್ಬನೂ ಸಾಧಿಸಲು ಪ್ರಯತ್ನಿಸುತ್ತಿದ್ದ. ಯಾರಿಗೆ ಆ ಫ್ಲಾಸ್ಕ್ ತುಂಬಾ ವೈನ್ ಸೇರಬೇಕು ಎಂಬುದು ಕಗ್ಗಂಟಾಗಿ ಉಳಿಯಿತು.

ಅವರಲ್ಲೇ ಹಿರಿಯನೆನಿಸಿದ ಒಬ್ಬ, ''ನಾವೊಂದು ಹಾವು ಬರೆಯುವ ಸ್ಪರ್ಧೆ ಏರ್ಪಡಿಸೋಣ. ಯಾರು ಬೇಗನೇ ಹಾವಿನ ಚಿತ್ರ ಬರೆಯುತ್ತಾರೋ ಅವರಿಗೇ ಈ ವೈನ್, ಆಯ್ತೆ?'' ಎಂದು ಹೇಳಿದ.

ಸರಿ, ಒಬ್ಬೊಬ್ಬರೂ ಒಂದೊಂದು ಕಡ್ಡಿ ತೆಗೆದುಕೊಂಡು ನೆಲದ ಮೇಲೆ ಹಾವಿನ ಚಿತ್ರ ಬರೆಯತೊಡಗಿದರು. ಅವರಲ್ಲಿ ಒಬ್ಬ ಬಲುಬೇಗ ಹಾವಿನ ಚಿತ್ರ ಬರೆದು ಮುಗಿಸಿ, ''ನೋಡಿ, ನಾನೇ ಫಸ್ಟ್! ಈಗ ಇಲ್ಲಿ ನೋಡಿ, ಈ ಹಾವಿಗೆ ಕೆಲವು ಕಾಲುಗಳನ್ನು ಜೋಡಿಸುತ್ತೇನೆ,'' ಎಂದು ಹೇಳಿ ಹಾವಿಗೆ ಕಾಲು ಬಿಡಿಸಲು ಮುಂದಾದ.

ಅಷ್ಟರಲ್ಲಿಯೇ ಚಿತ್ರ ಬರೆದು ಮುಗಿಸಿದ್ದ ಮತ್ತೊಬ್ಬ, ''ಆಹಾ,



ನಾನೇ ಮೊದಲು,'' ಎಂದು ಹೇಳಿ ಫ್ಲಾಸ್ಕ್‌ನಲ್ಲಿದ್ದ ವೈನ್ ಗಟಗಟ ಕುಡಿಯತೊಡಗಿದ.

''ಅಯ್ಯೋ ಪೆದ್ದ! ಹಾವಿಗೆ ಕಾಲು ಇಲ್ಲ ಅನ್ನುವಷ್ಟು ಬುದ್ಧಿ ಬೇಡವೇ ? ನನ್ನ ಹಾವಿಗೆ ಕಾಲೇ ಇಲ್ಲ! ನಿನ್ನ ಹಾವಿಗೆ ನೀನು ಇನ್ನೂ ಕಾಲು ಬರೀತಾ ಇರೋದ್ರಿಂದ ಮೊದಲಿಗೆ ಚಿತ್ರ ಮುಗಿಸಿದವರು ನಾನೇ. ಅದಕ್ಕೇ ಈ ವೈನ್ ನನಗೇ,'' ಎಂದು ಹೇಳಿ ಫ್ಲಾಸ್ಕ್ ಖಾಲಿ ಮಾಡಿದ.

ಮೊದಲಿಗೇ ಹಾವು ಬರೆದು ಅದಕ್ಕೆ ಕಾಲು ಸೇರಿಸುತ್ತಿದ್ದವನಿಗೆ ಕುಡಿಯಲು ವೈನ್ ಸಿಗಲೇ ಇಲ್ಲ! ಅಷ್ಟೇ ಅಲ್ಲ, ಅಲ್ಲಿದ್ದವರೆಲ್ಲಾ ಅವನನ್ನು ಗೇಲಿ ಮಾಡಿ ನಕ್ಕರು. ಪೆದ್ರು ಅಂದ್ರೆ ಅಷ್ಟೇ ತಾನೇ ?

ಅಭೇದ್ಯ ಗುರಾಣಿ, ಬಲಿಷ್ಠ ಭರ್ಜಿ !

ಜಂಭ ಕೊಚ್ಚುವುದು, ಇಲ್ಲ ಸಲ್ಲದ ಗುಣಗಳನ್ನು ಹಚ್ಚಿ, ರೆಕ್ಕೆ ಪುಕ್ಕ ಕಟ್ಟಿ ಹೊಗಳುವುದು ಎಲ್ಲಾ ಕಾಲಕ್ಕೂ ಒಳ್ಳೆಯದಲ್ಲ. ಹಾಗೆ ಮಾರುವ ಭರದಲ್ಲಿ ತಾವು ಏನು ಹೇಳುತ್ತಿದ್ದೇವೆ ಎನ್ನುವುದನ್ನೇ ಮರೆತು ಇಕ್ಕಟ್ಟಿಗೆ ಸಿಲುಕುವ ಪ್ರಸಂಗಗಳೂ ಬರಬಹುದು. ಅಂತಹ ಕಥೆ ಇಲ್ಲಿದೆ.


ಒಂದಾನೊಂದು ಕಾಲದಲ್ಲಿ ಚೀನಾದ **ಚೂ** ರಾಜ್ಯದ ಬೀದಿಗಳಲ್ಲಿ ಒಬ್ಬ ವ್ಯಾಪಾರಿ ಕತ್ತಿ, ಭರ್ಜಿ, ಗುರಾಣಿಗಳನ್ನು ಮಾರಾಟ ಮಾಡುತ್ತಾ ಇದ್ದ. ಕೈಯಲ್ಲಿದ್ದ ಗುರಾಣಿಯನ್ನು ಎತ್ತಿ ಹಿಡಿದು, ಎಲ್ಲರಿಗೂ ತೋರಿಸಿ, ಗಟ್ಟಿ ದನಿಯಲ್ಲಿ ಜಂಭಕೊಚ್ಚುತ್ತಿದ್ದ.

''ನನ್ನ ಗುರಾಣಿಗಳು ಅಭೇದ್ಯ. ಜಗತ್ತಿನಲ್ಲಿ ಯಾವ ಭರ್ಜಿಯಾಗಲೀ, ಯಾವ ಕತ್ತಿಯಾಗಲೀ, ನನ್ನ ಈ ಗುರಾಣಿಗಳನ್ನು ಭೇದಿಸಲಾರವು. ಅವು ಎಷ್ಟೇ ಬಲವಾಗಿದ್ದರೂ, ಚೂಪಾಗಿದ್ದರೂ ನನ್ನ ಈ ಗುರಾಣಿಗಳ ಮುಂದೆ ನಿಷ್ಪ್ರಯೋಜಕ !''

ಹೀಗೆ ಸ್ವಲ್ಪ ಕಾಲ ಗುರಾಣಿಗಳ ಗುಣಗಾನ ಮಾಡಿ ಅವುಗಳನ್ನು ಕೆಳಗಿಟ್ಟ. ಈಗ ಅಲ್ಲಿದ್ದ ಭರ್ಜಿಯನ್ನು ಎತ್ತಿ ತೋರಿಸಿ, ''ನನ್ನ ಈ ಭರ್ಜಿಗಳು ಬಲಿಷ್ಠ, ಚೂಪು ಮತ್ತು ಮುರಿಯಲಾರದಂಥವುಗಳು. ಎಂತಹ ಅಭೇದ್ಯ ಗುರಾಣಿಯೇ ಇರಲಿ ಅದನ್ನು ಭೇದಿಸಿಯೇ ತೀರುವಷ್ಟು ಚೂಪಾಗಿವೆ. ಈ ಭರ್ಜಿಗಳನ್ನು

ತಡೆಯಬಲ್ಲ ಗುರಾಣಿಗಳೇ ಇಲ್ಲ!'' ಎಂದು ತನ್ನ ತುತ್ತೂರಿ ತಾನೇ ಊದತೊಡಗಿದ.

ಇವನ ಜಂಭದ ಮಾತುಗಳನ್ನೆಲ್ಲಾ ಕೇಳುತ್ತಿದ್ದ ಹಿರಿಯ ಸಜ್ಜನನೊಬ್ಬ ಮುಂದೆ ಬಂದು, ''ಅಯ್ಯಾ, ನಿನ್ನ ಬಲಿಷ್ಠ ಭರ್ಜಿಯಿಂದ ನಿನ್ನ ಅಭೇದ್ಯವಾದ ಗುರಾಣಿಗೆ ಹೊಡೆದಾಗ ಏನಾಗುತ್ತದೆ? ನೀನು ಹೇಳುತ್ತಿರುವುದು ನಿಜವೋ, ಸುಳ್ಳೋ





ಅಂತ ನಿನಗೇ ಗೊತ್ತಾಗುತ್ತೆ, ಅಲ್ವೇ ?'' ಎಂದು ಹೇಳಿದ.

ಮಾತಿನ ಭರದಲ್ಲಿ ಜಂಭಕೊಚ್ಚುತ್ತಾ ವ್ಯಾಪಾರ ಕುದುರಿಸುತ್ತಿದ್ದ ಆ ವ್ಯಾಪಾರಿಗೆ ಈ ರೀತಿಯ ಪ್ರತಿಕ್ರಿಯೆ ಬರುತ್ತದೆ ಎನ್ನುವ ನಿರೀಕ್ಷೆಯೇ ಇರಲಿಲ್ಲ! ಜಂಭ ಕೊಚ್ಚುತ್ತಿದ್ದ ಅವನ ಮುಖ ಈಗ ಇಂಗು ತಿಂದ ಮಂಗನಂತಾಯಿತು! ಟ್ಟಿನಿಂದ ಕೆಂಪಾಯಿತು ! ಮಾತುಗಳೇ ಹೊರಡದಾದವು !

ಎಂತಹ ಸುಂದರ ವಿರೋಧಾಭಾಸ, ಅಲ್ವೆ ?

ಅದೃಷ್ಟದ ಹಾದಿ ಕಾಯುವುದು

ಯಾವಾಗಲೂ ಅದೃಷ್ಟವನ್ನೇ ನಂಬಿ ಕೈ ಕಟ್ಟಿ ಕೂರಬಾರದು, ಅಲ್ವೆ ? ನಮ್ಮ ಪ್ರಯತ್ನವನ್ನು ನಾವು ಮಾಡಲೇ ಬೇಕು. ಅಕಸ್ಮಾತ್ ಅದೃಷ್ಟ ಖುಲಾಯಿಸಿದರೆ ಲಾಭವೇ. ಬರೀ ಅದೃಷ್ಟವನ್ನು ನಂಬಿ ಕುಳಿತರೆ ನಮ್ಮದೆಲ್ಲವೂ ನಾಶವಾಗಿಹೋಗುತ್ತದೆ. ಅಂತಹ ಒಂದು ಕಥೆ ಇಲ್ಲಿದೆ.

ಚೀನಾದ ಸುಂದರ ಬೆಟ್ಟಗುಡ್ಡಗಳ ತಪ್ಪಲಿನ ಒಂದು ಹಳ್ಳಿಯಲ್ಲಿ ಒಬ್ಬಾನೊಬ್ಬ ರೈತ ಒಂದು ದಿನ ತನ್ನ ಹೊಲದಲ್ಲಿ ಉಳುಮೆ ಮಾಡುತ್ತಿದ್ದ. ಇದ್ದಕ್ಕಿದ್ದಂತೆ ಅಲ್ಲಿಗೆ ಓಡೋಡುತ್ತಾ ಬಂದ ಮೊಲವೊಂದು ಆ ರೈತನನ್ನು ಹಾಯ್ದು ರಭಸವಾಗಿ ಓಡುತ್ತಲೇ ಹತ್ತಿರದಲ್ಲಿದ್ದ ದೊಡ್ಡ ಮರವೊಂದರ ಬೊಡ್ಡೆಗೆ ಢಿಕ್ಕಿ ಹೊಡೆದು ಅಲ್ಲಿಯೇ ಬಿದ್ದು ಸತ್ತುಹೋಯಿತು.

ಅದೇ ತಾನೇ ಸತ್ತಿದ್ದ ಆ ಬಿಳಿ ಮೊಲವನ್ನು ಎತ್ತಿಕೊಂಡು 'ಈ ಹೊತ್ತಿನ ಊಟಕ್ಕಾಯಿತು' ಎಂದು ಖುಷಿಯಿಂದ ಆ ರೈತ ಮನೆಯ ಕಡೆ ಹೊರಟ. ಮೊಲದ ಮಾಂಸದ ಊಟದ ಗಮ್ಮತ್ತಿನಲ್ಲಿ ಮೈಮರೆತು ಒಂದಷ್ಟು ವೈನ್ ಸೇವಿಸಿದ. ಕುಡಿದ ಅಮಲಿನಲ್ಲಿ ಅವನ ಆಲೋಚನಾ ಲಹರಿ ಹಾರುಗುದುರಿಯ ಬೆನ್ನ ಏರಿತ್ತು. ಮತ್ತೇರಿದ ಆ ರೈತನ ಆಲೋಚನಾ ಲಹರಿ ಹೀಗೆ ಹರಿಯುತ್ತಿತ್ತು, ''ಅಲ್ಲಾ, ನಾನೇಕೆ ದಿನವಿಡೀ ಕಷ್ಟಪಟ್ಟು



ಹೊಲದಲ್ಲಿ ದುಡಿಯಬೇಕು? ಇವತ್ತಿನ ಹಾಗೆ ದಿನವೂ ಒಂದೊಂದು ಮೊಲ ನನ್ನ ಹೊಲದಲ್ಲಿರುವ ಮರಕ್ಕೆ ಢಿಕ್ಕಿ ಹೊಡೆದು ಬುಟ್ಟಿಗೆ ಬೀಳತೊಡಗಿದರೆ ಅದನ್ನೇ ತಿಂದು ಆರಾಮವಾಗಿ ಇರಬಾರದೇಕೆ? ಅದೃಷ್ಟ ನನ್ನ ಕಡೆಗೆ ಒಲಿದಿರುವಾಗ ನಾನೇಕೆ ಕೆಲಸ ಮಾಡಿ ದಣಿಯಬೇಕು? ವಿಶ್ರಾಂತಿ ತೆಗೆದುಕೊಂಡರೆ ತಪ್ಪೇನು?''

ಆಲೋಚನೆ ಎಷ್ಟು ಪ್ರಬಲವಾಗಿತ್ತು ಅಂದ್ರೆ ಮಾರನೇ ದಿನ ಬೆಳಗ್ಗೆ ಎಂದಿನಂತೆ ಹೊಲಕ್ಕೆ ಹೋದ ಆ ರೈತ ಉಳುಮೆ ಮಾಡುವುದು, ಬದು ಸರಿಮಾಡುವುದು, ಹೊಲದ ಇತರೆ



ಕೆಲಸ ಮಾಡುವುದು ಎಲ್ಲವನ್ನೂ ಬಿಟ್ಟು ಹೊಲದಲ್ಲಿದ್ದ ಆ
ದೊಡ್ಡ ಮರದ ಬುಡದಲ್ಲಿ ದೊಡ್ಡ ಬುಟ್ಟಿ ಇಟ್ಟುಕೊಂಡು,
''ಇನ್ನೇನು ಈಗ ಮೊಲವೊಂದು ಓಡಿಬರುತ್ತದೆ, ಢಿಕ್ಕಿ
ಹೊಡೆದು ಬಿದ್ದು ಸಾಯುತ್ತದೆ'', ಎಂದು ಕಾಯುತ್ತಾ ಕುಳಿತ.

ಬೆಳಗಿನಿಂದ ಸಂಜೆಯವರೆಗೂ ಕಾದದ್ದೇ ಕಾದದ್ದು! ಮೊಲ
ಬರಲೇ ಇಲ್ಲ! ಢಿಕ್ಕಿ ಹೊಡೆದು ಸಾಯಲೂ ಇಲ್ಲಾ! ಮೊಲದ
ಮಾಂಸದ ಊಟವೂ ಇಲ್ಲ! ಈತ ಕೆಲಸ ಮಾಡಲೂ ಇಲ್ಲ!
ಕಾಯುವಿಕೆ ಮುಗಿಯಲೂ ಇಲ್ಲ! ಮೈಮುರಿದು ದುಡಿಯಲೂ
ಇಲ್ಲ! ದಿನ ದಿನವೂ ಆತ ಮೊಲದ ಹಾದಿ ಕಾಯುತ್ತಲೇ ಇದ್ದ!
ಮೊಲ ಮರೀಚಿಕೆಯಾಯ್ತು!

ಇದನ್ನೆಲ್ಲಾ ನೋಡಿದ, ಕೇಳಿದ ಜನ ನಗದೇ ಇನ್ನೇನು ತಾನೆ
ಮಾಡಿಯಾರು ? ನೀವೇ ಹೇಳಿ ?

ನಕಲಿ ಶ್ಯಾಮನ ಅನಾವರಣ

ಬಹಳ ಬಹಳ ಹಿಂದೆ, ಚೀನಾದ ಕ್ವೀ ಎಂಬ ರಾಜ್ಯದಲ್ಲಿ ನಡೆದ ಕಥೆ ಇದು. ಅಲ್ಲಿನ ಮಹಾರಾಜನಾಗಿದ್ದ ಕಿ ಯುವಾನ್ ವಾಂಗ್ '**ಯೂ**' ಎಂಬ ಕೊಳಲಿನಂತಿರುವ ಗಾಳಿವಾದ್ಯವನ್ನು ಸುಶ್ರಾವ್ಯವಾಗಿ ನುಡಿಸುವುದನ್ನು ಕೇಳುವ ಹವ್ಯಾಸ ಬೆಳೆಸಿಕೊಂಡಿದ್ದ. ಒಬ್ಬರು, ಇಬ್ಬರು, ಒಂದು ಪುಟ್ಟ ತಂಡ ಹೀಗೆ ವಿವಿಧ ಸಂಯೋಜನೆಗಳಲ್ಲಿ ನುಡಿಸುವುದನ್ನು ಕೇಳಿದ ರಾಜನಿಗೆ ಒಮ್ಮೆಲೇ 300 ಜನರ ತಂಡ ಒಟ್ಟಿಗೇ ಇದನ್ನು ನುಡಿಸಿದರೆ ಕೇಳಲು ಎಷ್ಟು ಇಂಪಾಗಿರುತ್ತದೆ ಎಂಬ ಅದ್ಭುತ ಆಲೋಚನೆ ಹೊಳೆಯಿತು. ಏಕಾಏಕಿ 300 ಜನ **ಯೂ** ವಾದ್ಯಗಾರರು ಸಿಗಬೇಕಲ್ಲ? ವಾದ್ಯ ನುಡಿಸಲು ಬಲ್ಲ ಯಾರ್‍ಯಾರೋ ಬಂದು ಆ ತಂಡ ಸೇರಿ ಒಟ್ಟಿಗೇ ಅಭ್ಯಾಸ ಆರಂಭಿಸಿದರು ಅನ್ನಿ.

ಅಭ್ಯಾಸವೇನೋ ಚೆನ್ನಾಗಿಯೇ ಮುಂದುವರೆಯುತ್ತಿತ್ತು. ಆ ರಾಜ್ಯದಲ್ಲಿ ನಾನ್‌ಗಾವೋ ಎಂಬ ಯುವಕನಿಗೆ **ಯೂ** ವಾದ್ಯವನ್ನು ನುಡಿಸಬೇಕು ಎಂಬ ಆಸೆ ಇತ್ತು. ರಾಜನ ಬಳಿ ಹೋಗಿ ತನಗೂ ವಾದ್ಯ ನುಡಿಸಲು ಬರುತ್ತದೆ, ತಂಡ ಸೇರಲು ಅವಕಾಶ ಕೊಡಿ ಎಂದು ಬೇಡಿಕೊಂಡ. ಗುಂಪಿನಲ್ಲಿ ಗೋವಿಂದ ಅಂತ ಇವನನ್ನೂ ಸೇರಿಸಿಕೊಂಡರು.

ಮಜಾ ಏನು ಅಂದ್ರೆ ಅವನಿಗೆ ಆ ವಾದ್ಯವನ್ನು ನುಡಿಸಲು



ಬರುತ್ತಿರಲಿಲ್ಲ! ಅವನು ಕಲಿತಿದ್ದರೆ ತಾನೇ ಬರುವುದಕ್ಕೆ! ವಾದ್ಯವನ್ನು ಹೇಗೆ ಹಿಡಿಯಬೇಕು ಅನ್ನುವುದೂ ತಿಳಿದಿರಲಿಲ್ಲ! ಆದರೆ ಆತ ಜಾಣ. 300 ಜನರ ಈ ಮಹಾ ವಾದ್ಯಗಾರರ ತಂಡದಲ್ಲಿ ನಡುವೆ ನುಸುಳಿ, ಇತರರು ಹೇಗೆ ವಾದ್ಯವನ್ನು ಹಿಡಿಯುತ್ತಾರೋ ಹಾಗೇ ಹಿಡಿದುಕೊಂಡು ಅವರಂತೆಯೇ ನುಡಿಸುವವನಂತೆ ನಟಿಸತೊಡಗಿದ! ಅಷ್ಟೊಂದು ಜನರ ವಾದ್ಯವೃಂದದಲ್ಲಿ ಇವನು ನುಡಿಸಿದನೋ ಬಿಟ್ಟನೋ ಯಾರು ಕೇಳುತ್ತಾರೆ? ಯಾರಿಗೆ ಗೊತ್ತಾಗುತ್ತದೆ, ಹೇಳಿ?

ಮಹಾರಾಜ ಬದುಕಿರುವವರೆಗೂ ವಾದ್ಯವೃಂದದಲ್ಲಿದ್ದ ಈ ನಕಲಿ ಶ್ಯಾಮನ ಪತ್ತೆಯಾಗಲಿಲ್ಲ. ರಾಜನ ಮರಣಾನಂತರ ಯುವರಾಜ ಪಟ್ಟಕ್ಕೆ ಬಂದ. ಅವನಿಗೂ ಯೂ ವಾದ್ಯವನ್ನು ಕೇಳುವ ಹವ್ಯಾಸ ಬೆಳೆದಿತ್ತು. ಒಂದೇ ಒಂದು ವ್ಯತ್ಯಾಸ ಎಂದರೆ ಮಹಾರಾಜನಿಗೆ ನೂರಾರು ಜನ ವಾದ್ಯವೃಂದದಲ್ಲಿ ಯೂ ವಾದ್ಯ ನುಡಿಸುವುದನ್ನು ಕೇಳುವ ಆಸೆ ಇದ್ದರೆ ಯುವರಾಜನಿಗೆ ಒಬ್ಬರೇ ನುಡಿಸುವುದನ್ನು ಕೇಳಲು ಇಷ್ಟ. ಹೀಗಾಗಿ 300



ಜನರೂ ಸರದಿಯಂತೆ ಪ್ರತಿ ದಿನ ಒಬ್ಬೊಬ್ಬರೇ ಯುವರಾಜ ನೆದುರು ವಾದ್ಯ ನುಡಿಸುವುದಕ್ಕೆ ಏರ್ಪಾಡಾಯಿತು. ಹೇಗೂ ನಿತ್ಯ ಅಭ್ಯಾಸ ಮಾಡಿದ್ದರಲ್ಲ, ನಿತ್ಯವೂ ಒಬ್ಬೊಬ್ಬರೇ ಬಂದು ಯುವರಾಜನ ಅಪೇಕ್ಷೆಯಂತೆ ವಾದ್ಯ ನುಡಿಸಿ ತೃಪ್ತಿ ಪಡಿಸ ತೊಡಗಿದರು. ಎಲ್ಲರ ಪಾಳಿ ಬಂದಂತೆ ನಾನ್‌ಗಾವೋ ಸರತಿಯೂ ಬಂತು. ಅಷ್ಟು ದಿನ ಕಳೆದರೂ ಆತ ವಾದ್ಯ ನುಡಿಸುವುದನ್ನು ಕಲಿಯಲೇ ಇಲ್ಲ! ಈಗ ಒಬ್ಬನೇ ನುಡಿಸುವುದೆಂತು ? ಪ್ರಾಣ ಗಂಟಲಿಗೆ ಬಂತು. ಏನೇನೋ ನೆಪ ಒಡ್ಡಿ ಪಾಳಿ ತಪ್ಪಿಸಿಕೊಳ್ಳಲು ನೋಡಿದ. ಸಾಧ್ಯವಾಗಲಿಲ್ಲ. ಕೊನೆಗೆ ಉಳಿದ ಮಾರ್ಗ ವೆಂದರೆ ರಾಜನೆದರುರು ಹೋಗಿ ತನ್ನ ತಪ್ಪು ಒಪ್ಪಿಕೊಳ್ಳುವುದು ಇಲ್ಲವೇ ಊರೇ ಬಿಟ್ಟು ಓಡಿಹೋಗುವುದು. ಮೈಗಳ್ಳ ನಾನ್‌ಗಾವೋ, ತಾನು ನಕಲಿಶ್ಯಾಮ ಎಂಬುದು ಗೊತ್ತಾದರೆ ಯುವರಾಜನಿಂದ ಶಿಕ್ಷೆ ತಪ್ಪಿದ್ದಲ್ಲ ಎಂಬುದನ್ನು ಅರಿತು ರಾಜ್ಯದಿಂದಲೇ ದೂರ ಓಡಿದ.

ತುಟಿ ಮತ್ತು ಹಲ್ಲುಗಳು

ಚೇನ್ ಮತ್ತು ಕುವೋ ರಾಜ್ಯಗಳ ನಡುವೆ **ಯು** ಎಂಬ ರಾಜ್ಯವಿತ್ತು. ಚೇನ್‌ನ ದೊರೆ ಆಕ್ರಮಣಕಾರಿ, ಯುದ್ಧೋತ್ಸಾಹಿ ಸ್ವಭಾವದವನಾಗಿದ್ದ. ಒಮ್ಮೆ **ಯು** ರಾಜ್ಯದ ಮೂಲಕವಾಗಿ ತನ್ನ ಸೈನ್ಯವನ್ನು ಕೊಂಡೊಯ್ದು ಕುವೋ ರಾಜ್ಯವನ್ನು ವಶಪಡಿಸಿ ಕೊಳ್ಳಬೇಕು ಎಂಬ ವಿಚಿತ್ರ ಆಲೋಚನೆ ಅವನಿಗೆ ಬಂತು. ಆದರೆ **ಯು** ರಾಜ್ಯದ ಮೂಲಕ ಹಾದುಹೋಗಲು ಅಲ್ಲಿನ ರಾಜ ಅನುಮತಿ ನಿರಾಕರಿಸಿದರೆ ಏನು ಮಾಡುವುದು ? ಏನಾದರೂ ಒಂದು ಮಾರ್ಗ ಹುಡುಕಲೇ ಬೇಕಲ್ಲ? ಆತನ ಆಸ್ಥಾನದ ಹಿರಿಯ ಅಧಿಕಾರಿ ಮೇಧಾವಿ ಹುಸ್‌ಶಿ ಹೀಗೊಂದು ಸಲಹೆ ಮುಂದಿಟ್ಟ.


''ರಾಜನ್, ನಮ್ಮ ರಾಜ್ಯದ ಅತ್ಯಮೂಲ್ಯ ನಿಧಿಗಳಾದ **ಚು-ಆಯ್-ಚಿ ಹಸುರು ರತ್ನ**ವನ್ನು ಮತ್ತು **ಚೂ ರಾಜಾಶ್ವ**ವನ್ನು **ಯು** ರಾಜನಿಗೆ ಕಾಣಿಕೆಯಾಗಿ ಕಳುಹಿಸಿ, ನಯವಾಗಿ ಒಲಿಸಿಕೊಂಡು, ಅವನ ರಾಜ್ಯದ ಮೂಲಕ ನಮ್ಮ ಸೈನ್ಯ ಕುವೋ ಮೇಲೆ ದಾಳಿ ಮಾಡಲು ಅನುಮತಿ ಕೇಳುವುದರಿಂದ ಅವನಿಗೆ ಅನುಮತಿ ನಿರಾಕರಿಸಲು ಸಾಧ್ಯವಾಗದೆಂದು ನನ್ನ ಭಾವನೆ.''

''**ಚು-ಆಯ್-ಚಿ ಹಸುರು ರತ್ನ**ವನ್ನು ನಮ್ಮ ಪೂರ್ವಿಕರು ಕಷ್ಟಪಟ್ಟು ಸಂಪಾದಿಸಿ ಕಾಪಾಡಿಕೊಂಡು ಬಂದಿದ್ದಾರೆ. ಹಾಗೆಯೇ

ಚೂ ರಾಜಾಶ್ವ ನಮ್ಮ ಬಳಿಯಿರುವ ಅತ್ಯುತ್ತಮ, ಅಪರೂಪದ ಕುದುರೆಯಾಗಿರುವ ವಿಷಯ ನಿನಗೂ ಗೊತ್ತೇ ಇದೆ. ಒಂದು ವೇಳೆ ನಿನ್ನ ಸಲಹೆಯಂತೆ ಅವುಗಳನ್ನು ಯು ರಾಜನಿಗೆ ಕಾಣಿಕೆಯಾಗಿ ಕಳುಹಿಸಿಕೊಟ್ಟಾಗ ಆತ ಅವುಗಳನ್ನು ಸ್ವೀಕರಿಸಿ, ತನ್ನಲ್ಲಿಸಿರಿಸಿಕೊಂಡು ನಮ್ಮ ಸೈನ್ಯವು ಹಾದುಹೋಗಲು ಅನುಮತಿ ನೀಡದೇ ಹೋದಲ್ಲಿ ಏನು ಮಾಡುವುದು ?'' ಎಂದು ಚಿಂತೆ ವ್ಯಕ್ತಮಾಡಿದ ರಾಜ.

''ರಾಜನ್, ಯು ರಾಜನಿಗೆ ಅನುಮತಿ ನೀಡಲು ಇಷ್ಟ ಇಲ್ಲದೇ ಹೋದ ಪಕ್ಷದಲ್ಲಿ ಆತ ನಿಮ್ಮ ಕಾಣಿಕೆಗಳನ್ನು ಸ್ವೀಕರಿಸದೇ ಮರಳಿ ಕಳುಹಿಸಬಹುದು. ಒಂದು ವೇಳೆ ಆತ ಕಾಣಿಕೆ ಸ್ವೀಕರಿಸಿದರೆ ಅನುಮತಿ ಕೊಡಲು ಸಮ್ಮತಿ ಇದೆ ಎಂದೇ ಅರ್ಥ. ಆತ ಕಾಣಿಕೆಗಳನ್ನು ಸ್ವೀಕರಿಸುತ್ತಾನೋ ಇಲ್ಲವೋ ಅದೇನೂ ಅಂತಹ ದೊಡ್ಡ ವಿಷಯವೇ ಅಲ್ಲ. ಅವುಗಳನ್ನು ಅವನು ತೆಗೆದು ಕೊಂಡು ಅವನ ಬಳಿ ಇಟ್ಟುಕೊಂಡರೆ ಅವು ತಾತ್ಕಾಲಿಕವಾಗಿ ಅವನ ವಶದಲ್ಲಿರುತ್ತವೆ ಅಷ್ಟೇ ! ನಂತರದಲ್ಲಿ ನೀವು ಅವುಗಳನ್ನು ಹಿಂದಕ್ಕೆ ಪಡೆಯಲೂ ಬರುತ್ತದೆ. ನಿಮ್ಮ ಈ ಅಮೂಲ್ಯ ರತ್ನವನ್ನು ನಿಮ್ಮ ಒಳಕೋಣೆಯಿಂದ ಹೊರಕೋಣೆಗೆ ಸಾಗಿಸಿದ್ದೀರಿ, ನಿಮ್ಮ ರಾಜಾಶ್ವವನ್ನು ನಿಮ್ಮ ಅರಮನೆಯ ಲಾಯದ ಬದಲಾಗಿ ಹೊರಗಿರುವ ಇನ್ನೊಂದು ಲಾಯದಲ್ಲಿ ಕಟ್ಟಿರುವಿರೆಂದು ಭಾವಿಸಿಕೊಳ್ಳಿರಿ. ಇದಿಷ್ಟೇ ನಾನು ಹೇಳಲಿಕ್ಕಿರುವುದು,'' ಎಂದ ಆ ಅಧಿಕಾರಿ ಮುಗುಳ್ನಗುತ್ತಾ.

ಚೀನ್ ರಾಜನಿಗೆ ಆ ಅಧಿಕಾರಿಯ ಮಾತಿನ ಅರ್ಥ ಥಟ್ಟನೇ



ಹೊಳೆಯಿತು. ಕೂಡಲೇ ತನ್ನಲ್ಲಿದ್ದ **ಚು-ಆಯ್-ಚಿ** ಹಸುರು ರತ್ನವನ್ನು ಮತ್ತು **ಚೂ** ರಾಜಾಶ್ವವನ್ನು **ಯು** ರಾಜನಿಗೆ ಕಾಣಿಕೆಯಾಗಿ ಕಳುಹಿಸಿ ತನ್ನ ಸೈನ್ಯ ಆ ರಾಜ್ಯದ ಮೂಲಕ ಹಾದುಹೋಗಲು ಅನುಮತಿ ಕೋರಿದ.

ಚೀನ್ ರಾಜ್ಯದ ಅತ್ಯಮೂಲ್ಯ ನಿಧಿಯೇ ಕಾಣಿಕೆಯಾಗಿ ಬಂದಿದ್ದನ್ನು ಖುಷಿಯಿಂದ ಸ್ವೀಕರಿಸಿದ **ಯು** ರಾಜ ಹಿಂದೆ ಮುಂದೆ ಯೋಚಿಸದೇ ಕೂಡಲೇ ಅನುಮತಿ ಕೊಟ್ಟುಬಿಟ್ಟ! ಆದಾಗ್ಯೂ **ಯು** ರಾಜ್ಯದ ಹಿರಿಯ ಅಧಿಕಾರಿ ಕುಂಗ್-ತ್ಸು-ಚೀ ದೂರದೃಷ್ಟಿಯಿಂದ ಆಲೋಚಿಸಿ ಅನುಮತಿ ಕೊಡಬೇಡಿರಿ

ಎಂದು ಪರಿಪರಿಯಾಗಿ ಕೇಳಿಕೊಂಡ.

"ರಾಜನ್, ನೀವು ತಪ್ಪು ಮಾಡುತ್ತಿದ್ದೀರಿ. ಕುವೋ ರಾಜನು ನಮ್ಮ ನೆರೆಯ ಆಪ್ತಮಿತ್ರ. ನಮ್ಮಿಬ್ಬರ ರಾಜ್ಯಗಳು ಮತ್ತು ಸೈನ್ಯಗಳು ಹಲ್ಲು ಮತ್ತು ತುಟಿಗಳು ಇದ್ದಂತೆ ಪರಸ್ಪರ ಸಹಕಾರದಿಂದ ಪರಸ್ಪರರನ್ನು ರಕ್ಷಿಸುತ್ತಿದ್ದೇವೆ. ಒಮ್ಮೆ ತುಟಿಯೇ ಹರಿದುಹೋಯಿತು ಎಂದರೆ ಹಲ್ಲುಗಳು ಚಳಿಗೆ ನಡುಗದೇ ಹೋಗುತ್ತವೆಯೇ? ತುಟಿಗಳೇ ಇಲ್ಲದೆ ಹಲ್ಲುಗಳಿಗೆ ರಕ್ಷಣೆ ಸಾಧ್ಯವೆ? ತುಟಿಯೆಂಬ ರಕ್ಷಣಾ ಕೋಟೆಯೇ ಬಿದ್ದುಹೋದರೆ ಹಲ್ಲುಗಳು ಸುರಕ್ಷಿತವಾಗಿರುತ್ತವೆ ಎಂದು ಭಾವಿಸುತ್ತೀರಾ? ನೀವು ಕುವೋ ಮೇಲೆ ದಾಳಿ ಮಾಡಲು ಚೀನ್ ರಾಜನ ಸೈನ್ಯಕ್ಕೆ ನಮ್ಮ ರಾಜ್ಯದ ಮೂಲಕ ಹಾದು ಹೋಗಲು ಅನುಮತಿ



ಕೊಟ್ಟದ್ದೇ ಆದರೆ, ಅವರು ಕುವೋ ರಾಜನನ್ನು ಸೋಲಿಸಿ ಆ ರಾಜ್ಯವನ್ನು ಗೆದ್ದುಬಿಟ್ಟರೇ, ಮುಂದಿನ ಬಲಿಪಶು ಯಾರು? ನಾವೇ ಅಲ್ಲವೇ? ಕುವೋ ಇಲ್ಲದೇ ನಾವೊಬ್ಬರೇ ನಮ್ಮನ್ನು ಕಾಪಾಡಿಕೊಳ್ಳಲು ಸಾಧ್ಯವೇ? ಆದ್ದರಿಂದ ಇಂತಹ ಗೋಮುಖ ವ್ಯಾಘ್ರದಂತಹ ಮನವಿಯನ್ನು ದಯಮಾಡಿ ಪುರಸ್ಕರಿಸಬೇಡಿರಿ'' ಎಂದು ಮನಮುಟ್ಟುವಂತೆ ವಿವರಿಸಿದ.

ಕಾಣಿಕೆಗಳಿಂದ ಕಣ್ಣುತುಂಬಿಕೊಂಡ, ದೂರದೃಷ್ಟಿಯೇ ಇಲ್ಲದ, ಅತಿ ಆಸೆಯ **ಯು** ರಾಜ ಕುಂಗ್-ತ್ಸು-ಚೀಯ ಮಾತನ್ನು ಕಿವಿಯಮೇಲೆ ಹಾಕಿಕೊಳ್ಳಲೇ ಇಲ್ಲ. ಅನುಮತಿ ಸಿಕ್ಕ ಕೂಡಲೇ ಚೀನ್ ಸೈನ್ಯ **ಯು** ರಾಜ್ಯದ ಮೂಲಕ ಹಾದು ಹೋಗಿ ಕುವೋ ರಾಜನನ್ನು ಸೋಲಿಸಿ ವಿಜಯಿಯಾಗಿ ಹಿಂದಿರುಗಿತು. ಒಂದೆರಡು ವರ್ಷಗಳ ನಂತರ ಚೀನ್ ರಾಜನಿಗೆ ತನ್ನ ರಾಜ್ಯದ ಅಮೂಲ್ಯ ನಿಧಿಯನ್ನು ಮರಳಿ ಪಡೆಯುವ ಆಸೆಯಾಗಿ **ಯು** ರಾಜ್ಯದ ಮೇಲೆ ದಾಳಿ ಮಾಡಿ ಅದನ್ನು ಸುಲಭವಾಗಿ ವಶಪಡಿಸಿಕೊಂಡ. ಹಿರಿಯ ಅಧಿಕಾರಿ ತ್ಸುನ್‌ಶೀ **ಯು** ರಾಜನಲ್ಲಿಟ್ಟಿದ್ದ **ಚು-ಆಯ್-ಚಿ ಹಸುರು ರತ್ನ**ವನ್ನು ಮತ್ತು **ಚೂ ರಾಜಾಶ್ವ**ವನ್ನು ಮರಳಿ ತಂದು ಚೀನ್ ರಾಜನಿಗೆ ಒಪ್ಪಿಸಿದ. ದೂರದೃಷ್ಟಿಯ ಯೋಜನೆ ಎಂದರೆ ಇದೇ ಅಲ್ಲವೇ?

ಹಗಲುಗನಸಿನ ಪ್ರವೀಣ

ಮಾಸ್ಟರ್ ಚೀಯೂ ದೇಶದಲ್ಲೇ ಖ್ಯಾತಿವೆತ್ತ ಚದುರಂಗ ಆಟಗಾರ. ಯಾರೂ ಅವನನ್ನು ಸೋಲಿಸಲು ಸಾಧ್ಯವಿರಲಿಲ್ಲ. ಅವನ ಬಗ್ಗೆ ತುಂಬು ಅಭಿಮಾನವಿದ್ದ, ಚದುರಂಗದಾಟವನ್ನು ಅವನಿಂದಲೇ ಕಲಿಯಬೇಕೆಂಬ ಹಂಬಲವಿದ್ದ ಇಬ್ಬರು ಯುವಕರಿಗೆ ಆತ ಶ್ರದ್ಧೆಯಿಂದ ತರಬೇತಿ ನೀಡುತ್ತಿದ್ದ. ಅವರಲ್ಲಿ ಒಬ್ಬ ಹೇಳಿಕೊಟ್ಟದ್ದೆಲ್ಲವನ್ನೂ ಚಾಚೂ ತಪ್ಪದೇ ಕಲಿತುಕೊಂಡು, ಪರಿಶ್ರಮದಿಂದ ಕರಗತಮಾಡಿಕೊಂಡು ನಮ್ರತೆಯಿಂದ ಗುರುವಿನ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದ.

ಇನ್ನೊಬ್ಬ ಶಿಷ್ಯನಿಗೂ ಅಷ್ಟೇ ಅಭಿಮಾನ. ಹೇಳಿಕೊಟ್ಟ ಆಟವನ್ನು ಶ್ರದ್ಧೆಯಿಂದ ಕೇಳಿಸಿಕೊಳ್ಳುತ್ತಿದ್ದ. ಮೊದಲನೆಯವ ಮತ್ತು ಗುರು ಮಾಸ್ಟರ್ ಚೀಯೂ ಸೇರಿ ಆಡುವುದನ್ನು ಗಮನವಿಟ್ಟು ನೋಡುತ್ತಲೂ ಇದ್ದ. ಆದರೆ ಅವನ ಮನಸ್ಸು ಮಾತ್ರ ಇನ್ನೆಲ್ಲೋ ಅಲೆಯುತ್ತಿತ್ತು! ಸದಾ ಹಗಲುಗನಸು ಕಾಣುತ್ತಿದ್ದ. ನೆತ್ತಿಯ ಮೇಲೆಯೇ ಹಿಂಡು ಹಿಂಡಾಗಿ ಬೆಳ್ಳಕ್ಕಿಗಳು ಹಾರಿಹೋದಂತೆ ಕನಸು ಕಾಣುತ್ತಿದ್ದ. 'ಆಹಾ! ಇಂಥ ಸಮಯದಲ್ಲಿ ಕೈಯಲ್ಲಿ ಬಿಲ್ಲುಬಾಣಗಳಿದ್ದಿದ್ದರೇ!' ಎಂದು ಮನಸ್ಸಿನಲ್ಲೇ ಮಂಡಿಗೆ ತಿನ್ನುತ್ತಿದ್ದ.

ಹೀಗೇ ಕೆಲವು ವರ್ಷಗಳು ಕಳೆದವು. ಶ್ರದ್ಧೆಯಿಂದ



ಚದುರಂಗ ಕಲಿಯುತ್ತಿದ್ದ ಯುವಕ ಈಗ ಮಾಸ್ಟರ್ ಆಗಿದ್ದ. ಗುರುವಿಗೆ ಸರಿಸಮನೆನಿಸಿದ್ದ. ಗುರುವಿನಿಂದ ಬೆನ್ನುತಟ್ಟಿಸಿಕೊಂಡಿದ್ದ. ಜನರಿಂದ ಮನ್ನಣೆ ಗಳಿಸಿದ್ದ. ಪರಿಶ್ರಮಕ್ಕೆ ತಕ್ಕ ಪ್ರತಿಫಲ ಅವನಿಗೆ ಸಿಕ್ಕಿತ್ತು.

ಆ ಇನ್ನೊಬ್ಬ , ಹಗಲುಗನಸಿನ ಯುವಕ, ಎಷ್ಟೇ ಶ್ರದ್ಧೆಯಿಂದ ಆಟ ನೋಡುತ್ತಿದ್ದರೂ, ಪಾಠ ಕೇಳುತ್ತಿದ್ದರೂ, ಚದುರಂಗದ ಬಗ್ಗೆ ಏನನ್ನೂ ಕಲಿಯಲಿಲ್ಲ! ಹಗಲುಗನಸು ಕಾಣುವುದನ್ನು ಬಿಡಲೂ ಇಲ್ಲ. ಬೆಳ್ಳಕ್ಕಿಗಳ ಹಿಂಡಿನ ಬೆನ್ನು ಹತ್ತಿ ಬೇಟೆ ಆಡಲೂ ಇಲ್ಲ. ಹಕ್ಕಿ ಸಿಕ್ಕಲೇ ಇಲ್ಲ!

ಆತನಲ್ಲಿ ಮೊದಲನೆಯವನಿಗಿಂತ ಚದುರಂಗದ ಬಗ್ಗೆ ಕಡಿಮೆ ಶ್ರದ್ಧೆ ಇತ್ತೇ ? ಅಥವಾ ಆತನಿಗಿಂತ ಇವನು ದಡ್ಡನೇ ?

ಎರಡೂ ಅಲ್ಲ.

ಮತ್ತೆ ?

ಆಡಳಿತದ ಗುಟ್ಟು

ಹೊಸದಾಗಿ ಪ್ರಾಂತ್ಯಾಧಿಕಾರಿಯಾಗಿ ನೇಮಕವಾದ ಮೇಧಾವಿ ಮಿ ತ್ಸುಚಿಯೇನ್ ಪಕ್ಕದ ಶಾನ್‌ಫೂ ಪ್ರಾಂತ್ಯಕ್ಕೆ ಹೋಗುವ ಮೊದಲು ತನ್ನ ಗೆಳೆಯ ಯಾಂಗ್‌ಚೌನಲ್ಲಿ ಸಲಹೆ ಕೇಳಲು ಬಂದ.

''ನನಗೆ ಜನರ ಮೇಲೆ ಆಡಳಿತ ನಡೆಸುವ ಬಗ್ಗೆ ಏನೂ ಗೊತ್ತಿಲ್ಲ. ನನಗೆ ಮೀನು ಹಿಡಿಯುವುದರಲ್ಲಿ ಮಾತ್ರ ಪರಿಣತಿ ಇದೆ. ಬಹುಶಃ ಅದನ್ನೇ ನಿನಗೆ ಹೇಳಿದರೆ ಅದು ಒಳ್ಳೆಯ ವಿದಾಯದ ಕೊಡುಗೆ ಆಗಬಹುದು ಎಂದು ಅನ್ನಿಸುತ್ತದೆ,'' ಎಂದ ಯಾಂಗ್‌ಚೌ.

''ಓಹ್ ! ಎಂತ ಒಳ್ಳೆಯ ವಿಚಾರ. ದಯಮಾಡಿ ತಿಳಿಸಿರಿ,'' ಎಂದು ಒತ್ತಾಯಿಸಿದ ಮಿ ತ್ಸುಚಿಯೇನ್.

''ಯಾಂಗ್‌ಚಿಯಾವೋ ಎನ್ನುವ ಒಂದು ಬಗೆಯ ಮೀನುಗಳು ಗಾಳ ಹಾಕುವಷ್ಟರಲ್ಲೇ ಅದಕ್ಕೆ ಸಿಕ್ಕಿಸಿರುವ ಹುಳು ತಿನ್ನಲು ಹಿಂಡು ಹಿಂಡಾಗಿ ತಾವಾಗಿಯೇ ಬಂದು ಗಾಳಕ್ಕೆ ಬೀಳುತ್ತವೆ. ಈ ಮೀನುಗಳ ತುಂಬಾ ಬರೀ ಮುಳ್ಳುಗಳೇ! ಒಂಚೂರು ಮಾಂಸ ಅನ್ನುವುದೇ ಇರುವುದಿಲ್ಲ ಅವುಗಳಲ್ಲಿ. ಇವು ತಿನ್ನಲು ಯೋಗ್ಯವಲ್ಲ, ರುಚಿಯೂ ಇರುವುದಿಲ್ಲ ಎಂದೇ ಯಾರೂ ಇವುಗಳನ್ನು ಹಿಡಿಯಲು ಆಸಕ್ತಿ ತೋರಿಸುವುದಿಲ್ಲ.

ಇನ್ನೊಂದು ಬಗೆಯ ದಷ್ಟಪುಷ್ಟವಾದ ಬ್ರಿಮ್ ಎನ್ನುವ ಮೀನು ಇದೆ. ತುಂಬಾ ಮಾಂಸಲವಾಗಿ, ರುಚಿಯಾಗಿರುವ ಈ ಮೀನು ಗಾಳದತ್ತ ಕಣ್ಣೆತ್ತಿಯೂ ನೋಡುವುದಿಲ್ಲ. ಗಾಳದಿಂದ ಆದಷ್ಟು ದೂರದಲ್ಲಿಯೇ ಇರಲು ಪ್ರಯತ್ನಿಸುತ್ತದೆ. ಇಂತಹ ದೂರ ಓಡುವ ರುಚಿಕರವಾದ ಮೀನನ್ನು ಹಿಡಿಯುವುದು ಎಷ್ಟು ಕಷ್ಟ ಎನ್ನುವುದನ್ನು ನೀನೇ ಊಹಿಸಿಕೋ,'' ಎಂದ ಯಾಂಗ್‌ಚೌ.


''ತುಂಬಾ ಉಪಕಾರವಾಯಿತು. ಧನ್ಯವಾದಗಳು,'' ಎಂದು ವಂದಿಸಿ ಮಿ ತ್ಸುಚಿಯೇನ್ ಶಾನ್‌ಫೂ ಪ್ರಾಂತ್ಯಕ್ಕೆ ಪ್ರಯಾಣ ಬೆಳೆಸಿದ ಅವನಿಗೆ ದಾರಿಯುದ್ದಕ್ಕೂ ಆ ಮೀನು ಹಿಡಿಯುವ ಪಾಠ ಹೊಸದೇನನ್ನೋ ಕಲಿಸಿಕೊಟ್ಟಂತಿತ್ತು!

ಶಾನ್‌ಫೂ ಸಮೀಪಿಸುತ್ತಿದ್ದಂತೆಯೇ ಕೆಲವು ಜನ ಹಿಂಡು



ಹಿಂಡಾಗಿ, ಹಾರಗಳನ್ನು ಹಿಡಿದು ಹೊಸ ಆಡಳಿತಾಧಿಕಾರಿಯನ್ನು ಸ್ವಾಗತಿಸಲು ಓಡೋಡಿ ಬರುತ್ತಿದ್ದರು. 'ಓಹೋ! ಇವರು ನನ್ನ ಗೆಳೆಯ ಹೇಳಿದ ಯಾಂಗ್‌ಚಿಯಾವೊ ಮೀನಿನಂತಹ ಜನ. ಇವರನ್ನು ನಿವಾರಿಸಬೇಕು,' ಅಂದುಕೊಂಡು, ತನ್ನ ಸಾರಥಿಗೆ ''ಗಾಡಿಯನ್ನು ನಿಲ್ಲಿಸಬೇಡ. ವೇಗವಾಗಿ ಓಡಿಸು. ಇವರಿಂದ ತಪ್ಪಿಸಿಕೊಳ್ಳೋಣ'' ಎಂದ.

ಪ್ರಾಂತ್ಯಾಧಿಕಾರಿಯಾಗಿ ಆಡಳಿತ ಕೈಗೆತ್ತಿಕೊಂಡ ಸ್ವಲ್ಪ ಕಾಲದ ಮೇಲೆ ಆ ಪ್ರಾಂತ್ಯದ ಹಿರಿಯರನ್ನು, ಅನುಭವಿಗಳನ್ನು, ಹಿತಚಿಂತಕರನ್ನು ಭೇಟಿಯಾಗಿ ಅವರ ಸಲಹೆ ಸೂಚನೆಗಳನ್ನು, ಹಿತವಚನಗಳನ್ನು ಅನುಸರಿಸಿ ಆಡಳಿತ ನಡೆಸಲಾರಂಭಿಸಿ ಉತ್ತಮ ಆಡಳಿತಗಾರನೆಂದು ಜನರ ಮೆಚ್ಚುಗೆ ಗಳಿಸಿದ.




ಬಣ್ಣ ಬದಲಿಸುವುದು

ಒಮ್ಮೆ ತತ್ವಜ್ಞಾನಿ ಮಿಸಿಯಸ್ ಬಟ್ಟೆಗಳಿಗೆ ಬಣ್ಣಹಾಕುವ ಅಂಗಡಿಯಲ್ಲಿ ನಿಲ್ಲಬೇಕಾಗಿ ಬಂತು. ಅಲ್ಲಿ ಕೆಲಸಗಾರರು ಬಿಳಿಯ ರೇಷ್ಮೆ ಬಟ್ಟೆಗೆ ಬೇರೆ ಬೇರೆ ಬಣ್ಣಗಳನ್ನು ಹಾಕುತ್ತಿದ್ದರು. ಅದನ್ನೇ ಗಮನಿಸುತ್ತಿದ್ದ ಮಿಸಿಯಸ್ ನಿಟ್ಟುಸಿರು ಬಿಟ್ಟು ಹೀಗೆ ಹೇಳಿದ :

''ನೋಡಿ, ಈ ರೇಷ್ಮೆ ಬಟ್ಟೆ ಶುಭ್ರ ಬಿಳಿಯ ಬಣ್ಣದ್ದು. ಇದನ್ನು ನೀಲಿ ಬಣ್ಣದಲ್ಲಿ ಅದ್ದಿದರೆ ಅದು ನೀಲಿಯಾಗುತ್ತದೆ. ಹಳದಿ ಬಣ್ಣದಲ್ಲಿ ಅದ್ದಿದರೆ ಹಳದಿಯಾಗುತ್ತದೆ. ಒಮ್ಮೆ ಇದನ್ನು ಯಾವುದಾದರೂ ಬಣ್ಣದಲ್ಲಿ ಅದ್ದಿ ತೆಗೆದರೆ ಅದು ಮತ್ತೆ ಎಂದಿಗೂ ತನ್ನ ಮೂಲ ಬಿಳುಪು ಮತ್ತು ನಿಷ್ಕಳಂಕ ಸ್ಥಿತಿಯನ್ನು ಮರಳಿ ಪಡೆಯಲು ಸಾಧ್ಯವಿಲ್ಲ. ಇದು ಕೇವಲ ರೇಷ್ಮೆ ಬಟ್ಟೆಗೆ ಮಾತ್ರ ಅನ್ವಯಿಸುವುದಿಲ್ಲ!''



ಯಥೋಚಿತ ಮಾತು



ತತ್ವಜ್ಞಾನಿ ಮಿಸಿಯಸ್ ಶಿಷ್ಯರಲ್ಲಿ ತ್ಸು ಚೀನ್ ಕೂಡ ಒಬ್ಬ. ಒಂದು ದಿನ ಆತ ಕೇಳಿದ, ''ಗುರುಗಳೇ, ಮಾತಿನ ಮಲ್ಲರಾಗುವುದು ಒಳ್ಳೆಯದೆಂದು ನಿಮಗನ್ನಿಸುತ್ತದೆಯೇ ?''

''ಇಲ್ಲ. ಹಾಗನ್ನಿಸುವುದಿಲ್ಲ. ಇಗೋ, ಈ ಕೊಳದಲ್ಲಿನ ಕಪ್ಪೆಯ ಉದಾಹರಣೆಯನ್ನೇ ತೆಗೆದುಕೋ. ಹಗಲೂ ರಾತ್ರಿ ಒಂದೇ ಸಮನೇ ನಾಲಗೆ ಒಣಗುವವರೆಗೂ ವಟಗುಟ್ಟುತ್ತಲೇ ಇರುತ್ತದೆ. ಅದರತ್ತ ಯಾರು ಗಮನ ಕೊಡುತ್ತಾರೆ ? ಬದಲಿಗೆ ಹುಂಜವನ್ನು ನೋಡು. ಬೆಳಗಿನ ಜಾವ ಒಂದೆರಡು ಬಾರಿ ಮಾತ್ರ ಅದು 'ಕೊಕೊ...ಕ್ಕೋ' ಎಂದು ಕೂಗಿದರೂ ಸಾಕು ಎಲ್ಲರೂ ಅದನ್ನು ಕೇಳಿಸಿಕೊಂಡು ಏಳುತ್ತಾರೆ. ಏಕೆಂದರೆ ಅದು ಸರಿಯಾದ ಸಮಯಕ್ಕೆ ಅಗತ್ಯವಿದ್ದಷ್ಟು ಮಾತ್ರ ಮತ್ತು ನಿರ್ದಿಷ್ಟ ಉದ್ದೇಶದಿಂದ ಮಾತ್ರ ಕೂಗುತ್ತದೆ,'' ಎಂದು ಗುರು ಮಿಸಿಯಸ್ ಉತ್ತರಿಸಿದ.

ಆಪತ್ತಿಗೆ ಒದಗದ ವಸ್ತು ಎಲ್ಲಿದ್ದರೇನು ?

ಚುವಾಂಗ್ ಚೌ ಒಬ್ಬ ಕಡುಬಡವ. ಒಂದು ದಿನ ಹಸಿವು ತಡೆಯಲಾಗದೇ ತನ್ನ ನೆರೆಯವನ ಬಳಿ ಹೋಗಿ ಏನನ್ನಾದರೂ ತಿನ್ನಲು ಕೊಡುವಂತೆ ಕೇಳಿದ.

''ನಿನಗೆ ಸಹಾಯ ಮಾಡಬೇಕೂಂತ ನನಗೂ ಆಸೆ. ನಾನು ನನ್ನ ಬಾಡಿಗೆ ಹಣ ಸಂಗ್ರಹಿಸಿ ಬರುವವರೆಗೆ ಕಾಯಬೇಕು. ಆ ಹಣದಲ್ಲಿ ನಿನಗೆ ಮುನ್ನೂರು ಬೆಳ್ಳಿಯ ನಾಣ್ಯಗಳನ್ನು ಕೊಡ್ತೀನಿ. ಅದು ನಿನಗೆ ಖಂಡಿತಾ ಖುಷಿ ಕೊಡುತ್ತೆ, ಅಲ್ವೇ ?'' ಎಂದ ನೆರೆಯಾತ.

'ಆಪತ್ತಿಗೆ ಒದಗದ ನೆರವು ಯಾವಾಗ ಬಂದರೇನು ? ಕನ್ನಡಿಯ ಗಂಟು ಕೈಗೆ ಬಂದಷ್ಟೇ ಸಂತೋಷ' ಎಂದುಕೊಂಡ ಚುವಾಂಗ್ ಉತ್ತರವಾಗಿ ನೆರೆಯವನಿಗೆ ಈ ಕಥೆ ಹೇಳಿದ :

''ನಿನ್ನೆ ಸಂಜೆ ನಾನು ಬೀದಿಯಲ್ಲಿ ಹೋಗುತ್ತಿದ್ದಾಗ ಗಾಡಿಯ ಚಕ್ರದ ಭಾರದಿಂದ ಉಂಟಾದ ಗುಂಡಿಯೊಂದರಲ್ಲಿ ಒಂದು ದೊಡ್ಡ ಕಾರ್ಪ್ ಮೀನು ಒದ್ದಾಡ್ತಾ ಇದ್ದದ್ದನ್ನ ನೋಡಿದೆ. ಸಿಹಿನೀರಿನ ಕೊಳಗಳಲ್ಲಿರುವ ಆ ಮೀನು ಈ ಒಣ ಗುಂಡಿಯಲ್ಲಿ ಬಿದ್ದು ವಿಲವಿಲ ಒದ್ದಾಡುತ್ತಿತ್ತು! ನನ್ನನ್ನು ನೋಡಿದ್ದೇ ತಡ ಅದು ಶಕ್ತಿಮೀರಿ ಕಿರುಚಿ, ''ಅಯ್ಯಾ ದಯಾಳು ವೃದ್ಧನೇ! ದಯಮಾಡಿ ನನಗಾಗಿ ಒಂದು ಕೊಡ ನೀರನ್ನು ತಂದು ಈ ಗುಂಡಿಯಲ್ಲಿ ತುಂಬಿ ನನ್ನನ್ನು ಬದುಕಿಸು'' ಎಂದು ಬೇಡಿತು.



ನಾನು ತಲೆ ಅಲ್ಲಾಡಿಸುತ್ತಾ ಹೇಳಿದೆ, ‘‘ನಾನು ತುಂಬಾ ತುರ್ತಾಗಿ ನಮ್ಮ ಮಹಾರಾಜರನ್ನು ನೋಡಲಿಕ್ಕೆ ಅಂತ ಅವರ ಅರಮನೆ ಇರುವ ದಕ್ಷಿಣ ದಿಕ್ಕಿಗೆ ಪ್ರಯಾಣ ಹೊರಟಿದ್ದೇನೆ. ಅಲ್ಲಿಂದ ಬರುವಾಗ ಸೀಕಿಯಾಂಗ್ ನದಿಯಿಂದ ಒಂದು ಕೊಡ ನೀರನ್ನು ಹೊತ್ತುಕೊಂಡು ಬಂದು ನಿನ್ನನ್ನು ಬದುಕಿಸುತ್ತೇನೆ.’’

‘‘ಆದರಿಂದ ನನಗೇನು ಲಾಭವಾಗುತ್ತೆ, ಹೇಳು ? ಈ ಕ್ಷಣಕ್ಕೆ ಒಂದು ಕೊಡ ನೀರು ಸಿಕ್ಕಿದರೆ ನಾನು ಹೇಗೋ ಬದುಕಿ ಉಳಿದೇನು. ನೀನು ಸೀಕಿಯಾಂಗ್ ನದಿಯಿಂದ ನೀರು ತಂದು ನನ್ನನ್ನು ಬದುಕಿಸುತ್ತೀಯಾ ಅಂತ ಕಾಯುವುದೆಂದರೆ ಅದು ಆಗದ ಹೋಗದ ಮಾತು. ಅಷ್ಟರಲ್ಲಿ ನಾನು ಇದೇ ಗುಂಡಿಯಲ್ಲಿ ಸತ್ತು ಬಿದ್ದಿರಬಹುದು ಇಲ್ಲವೇ ಇಲ್ಲಿಯೇ ಹತ್ತಿರದಲ್ಲಿರುವ ಒಣ ಮೀನುಗಳ ಮಾರುಕಟ್ಟೆಯಲ್ಲಿ ನನ್ನನ್ನು ನೀನು ನೋಡಬೇಕಾಗುತ್ತೆ ಅಷ್ಟೇ!’’ ಎಂದು ಕೋಪದಿಂದ ಹೇಳಿತು ಆ ಸಿಹಿನೀರಿನ ದಷ್ಟಪುಷ್ಟ ಮೀನು. ಅದು ಹೇಳಿದ್ದರಲ್ಲೇನೂ ತಪ್ಪಿಲ್ಲ, ಅಲ್ವೇ ?

ಭೂತಗಳ ಚಿತ್ರ !

ಒಮ್ಮೆ ಮಹಾರಾಜ ಚೂಯಿ ತನ್ನ ಆಸ್ಥಾನದ ಚಿತ್ರಕಾರರನ್ನು ಕರೆಸಿ, ''ನಿಮಗೆ ಯಾವುದರ ಚಿತ್ರ ಬರೆಯುವುದು ತುಂಬಾ ಕಷ್ಟ?'' ಎಂದು ಕೇಳಿದ.

ನಾಯಿ, ಕುದುರೆ, ಸಾಕು ಪ್ರಾಣಿಗಳು, ಪಕ್ಷಿಗಳು, ಹೀಗೆ ಒಬ್ಬೊಬ್ಬರೂ ಒಂದೊಂದರ ಚಿತ್ರ ರಚಿಸುವುದು ಕಷ್ಟ ಎಂದರು.

''ಅತ್ಯಂತ ಸುಲಭವಾದದ್ದು?'' ರಾಜ ಪ್ರಶ್ನಿಸಿದ.



ಮತ್ತೆ ಅದೇ ರೀತಿಯಲ್ಲಿ ಒಬ್ಬೊಬ್ಬರೂ ಒಂದೊಂದು ರೀತಿಯ ಉತ್ತರ ಕೊಟ್ಟರು. ಅವರಲ್ಲಿ ಒಬ್ಬ ಕಲಾವಿದನ ಉತ್ತರ ಹೀಗಿತ್ತು :

''ಪ್ರಭುಗಳೇ, ದೆವ್ವ ಭೂತಗಳ ಚಿತ್ರ ರಚಿಸುವುದೆಂದರೆ ಅದು ಅತ್ಯಂತ ಸುಲಭದ ಕೆಲಸ. ಯಾಕೆ ಗೊತ್ತೇ ? ನಾಯಿ, ಕುದುರೆ, ಪಕ್ಷಿಗಳನ್ನು ನಾವು ನಿತ್ಯವೂ ನೋಡುತ್ತೇವೆ. ಅವುಗಳ ಚಿತ್ರಗಳಲ್ಲಿ ಏನಾದರೂ ವ್ಯತ್ಯಾಸವಿದ್ದರೆ ತಕ್ಷಣ ನಮ್ಮ ಗಮನಕ್ಕೆ ಬರುತ್ತದೆ. ದೆವ್ವ ಭೂತಗಳ ವಿಚಾರಕ್ಕೆ ಬಂದರೆ ಅವುಗಳನ್ನು ಯಾರು ನೋಡಿದ್ದಾರೆ ಹೇಳಿ ? ಅವು ಹೇಗೆ ಕಾಣುತ್ತವೆ ಅಂತ ಖಚಿತವಾಗಿ ಯಾರಾದರೂ ತಂದು ತೋರಿಸಿದ್ದಾರೆಯೇ ? ಯಾರಿಂದಲೂ ತೋರಿಸಲಿಕ್ಕಾಗಿಲ್ಲ. ಆದ್ದರಿಂದ ಅವುಗಳನ್ನು ನಾನು ಹೇಗೆ ಬೇಕೋ ಹಾಗೆ, ಯಾವುದೇ ಟೀಕೆಗೆ ಅವಕಾಶ ಇಲ್ಲದಂತೆ, ನನ್ನ ಮನಸ್ಸಿಗೆ ಬಂದಂತೆ ಚಿತ್ರಿಸುವುದು ಅತ್ಯಂತ ಸುಲಭ. ಅಲ್ಲವೇ ?''

ನೀವೇನಾದರೂ ದೆವ್ವ ಭೂತಗಳ ಚಿತ್ರ ಬಿಡಿಸಿದ್ದೀರಾ ?

ಡ್ರ್ಯಾಗನ್ ಪ್ರೀತಿ !

ಸರದಾರ ಷೀ ಗೆ ಡ್ರ್ಯಾಗನ್‌ಗಳೆಂದರೆ ತುಂಬಾ ಇಷ್ಟ. ಅವನ ಮನೆಯ ಗೋಡೆಗಳು, ಛಾವಣಿ, ಕಿಟಕಿ, ಬಾಗಿಲು, ಪರದೆಗಳು, ನೆಲಹಾಸು, ಕಂಬಗಳು, ಎಲ್ಲಿ ನೋಡಿದರಲ್ಲಿ ಡ್ರ್ಯಾಗನ್‌ಗಳ ಚಿತ್ರಗಳೇ ಚಿತ್ರಗಳು! ಈ ಡ್ರ್ಯಾಗನ್ ಪ್ರೀತಿ ಎಲ್ಲೆಡೆಗೂ ಸುದ್ದಿಯಾಗಿ ಹರಡಿತ್ತು ಕೂಡ.

ಮೋಡದ ನಾಡಿನಾಚೆ ಇರುವ ನಿಜವಾದ ಡ್ರ್ಯಾಗನ್‌ಗೆ 'ಸರದಾರ ಷೀ ಜೊತೆ ಮಾತಾಡಬೇಕು, ಅವನ ಪ್ರೀತಿಯನ್ನು





ಸವಿಯಬೇಕು' ಅನ್ನಿಸಿ ಒಮ್ಮೆ ಇದ್ದಕ್ಕಿದ್ದಂತೆಯೇ ಅವನ ಮಹಲಿಗೆ ಬಂದಿಳಿಯಿತು. ದಕ್ಷಿಣದ ಕಿಟಕಿಯಿಂದ ತನ್ನ ತಲೆ ತೂರಿಸಿ ಉತ್ತರದ ಕಿಟಕಿಯಿಂದ ತನ್ನ ಚೂಪಾದ ಬಾಲ ತೂರಿಸಿ ಮಹಲನ್ನು ಸುತ್ತುವರೆದು ಒಳಗೆ ಎಲ್ಲೆಡೆ ಬರೆದಿದ್ದ ಡ್ರ್ಯಾಗನ್ ಚಿತ್ರಗಳನ್ನು ನೋಡಿ ಸಂತಸಪಟ್ಟಿತು. ಸರದಾರನನ್ನು ನೋಡಿ ಅಭಿನಂದಿಸೋಣವೆಂದು ಅತ್ತಿತ್ತ ಹುಡುಕಿತು. ಅವನೆಲ್ಲಿದ್ದಾನೆ !

ಡ್ರ್ಯಾಗನ್‌ಗಳೆಂದರೆ ಪಂಚಪ್ರಾಣವೆಂದು ಬಾಯಲ್ಲಿ ಹೇಳುತ್ತಿದ್ದ ಸರದಾರ ಷೀ ನಿಜವಾದ ಡ್ರ್ಯಾಗನ್ ನೋಡುತ್ತಲೇ ಗಡಗಡ ನಡುಗಿ ಜೀವಭಯದಿಂದ ಹೇಳದೇ ಕೇಳದೇ ಮಹಲಿನ ಕಿಟಕಿಯೊಂದರಿಂದ ಜಿಗಿದು ಓಡಿಹೋದ. ಅವನಿಗೆ ನಿಜವಾದ ಡ್ರ್ಯಾಗನ್‌ಗಳಿಗಿಂತ ಅವುಗಳ ಚಿತ್ರಗಳೇ ಇಷ್ಟ!

ದಯಾಭಿಕ್ಷೆ ಬೇಡವಯ್ಯಾ !

ಚೀ ರಾಜ್ಯದಲ್ಲೊಮ್ಮೆ ಭೀಕರ ಬರಗಾಲ ಬಂತು. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜನ, ಜಾನುವಾರು ಹಸಿವಿನಿಂದ ಪ್ರಾಣ ಬಿಡುತ್ತಿದ್ದರು. ಚೀಯೆನ್ ಆವೋ ಎಂಬ ಕರಣಾಳುವೊಬ್ಬ ಬೀದಿ ಬದಿಯಲ್ಲಿ ಹಸಿದವರಿಗಾಗಿ ಅನ್ನಸತ್ರವನ್ನು ಇರಿಸಿದ. ಸಾಕಷ್ಟು ಜನ ಅಲ್ಲಿ ಉಂಡು ಹರಸಿ ಹೋಗುತ್ತಿದ್ದರು.

ಒಮ್ಮೆ ಅದೇ ದಾರಿಯಾಗಿ ಒಬ್ಬ ನಿತ್ರಾಣನಾದ ವ್ಯಕ್ತಿ ನಡೆಯಲಾರದೇ, ಕಣ್ತೆರೆದು ನೋಡಲೂ ಶಕ್ತಿ ಇಲ್ಲದಷ್ಟು





"ಅಲ್ಲಯ್ಯಾ, ಷೂಗಳನ್ನು ನಿನಗಾಗಿ ಕೊಳ್ಳಲು ಬಂದಿದ್ದೆಯೋ ಅಥವಾ ಇನ್ನಾರಿಗಾದರೂ ಕೊಂಡೊಯ್ಯಬೇಕಿತ್ತೇ?"

"ಹೇ ಹೇ ಹೇ! ನನಗೇ ಬೇಕಿತ್ತು. ಯಾಕೆ?"



"ಮತ್ತೆ ನಿನ್ನ ಕಾಲುಗಳು ನಿನ್ನೊಂದಿಗೇ ಇದ್ದುವಲ್ಲ! ಅದರ ಅಳತೆಗೆ ಸರಿಯಾದ ಷೂ ಹುಡುಕಬಹುದಿತ್ತಲ್ಲವೇ? ಅದರ ಅಳತೆಯ ದಾರಕ್ಕಾಗಿ ಮನೆಗೆ ಹೋಗಿ ಬರುವ ಅವಶ್ಯಕತೆ ಇತ್ತೇ?" ಎಂದು ಆ ನೆರೆಯವ ಕೇಳಿದ.

ನವಕರ್ನಾಟಕ ಕಿರಿಯರ ಕಥಾಮಾಲೆ





































ISBN 81-8467-115-6

9 788184 671155

ರೂ. 40

Code : 001463

www.navakarnataka.com

http://navakarnataka.blogspot.com